ಸಂಪುಟ - 3 ೨೦೦೩ - ೨೦೦3

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೩ ಆಗಸ್ಟ್, ಸೆಪ್ಟಂಬರ್ ೨೦೦೨ ಸಂಚಿಕೆ ೧,೨

ಪ್ರಜಾಪ್ರತಿನಿಧಿಗಳ ದಾಸ್ಯಪ್ರವೃತ್ತಿ
ಪ್ರಜಾಪ್ರಭುತ್ವಕ್ಕೆ ಕಲಂಕ

★

ಕನ್ನಡ ಕಂಪ್ಯೂಟರೀಕರಣದ ಕರ್ತೃ ಬರಹಬ್ರಹ್ಮ ವಾಸು

★

ಶಿಕ್ಷಣದ ಕ್ಷೇತ್ರದ ವಿರಳಿತಗಳು

★

ನೈತಿಕ ಅಧಃಪತನವೆಂದರೆ ಅಂತಸತ್ವದ ಸರ್ವನಾಶ

★

ಜ್ಞಾನ ತಪಸ್ವಿನಿ ಶ್ರೀಮತಿ ದುರ್ಗಾ ಭಾಗವತ್

★

ನಮ್ಮ ಜೀವನ ಮತ್ತು ಸಂಸ್ಕೃತಿ

★

ಭಯೋತ್ಪಾದನೆಯನ್ನು ನಿರ್ನಾಮ ಮಾಡಿ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ: ೩ ಸಂಚಿಕೆ: ೧

ಆಗಸ್ಟ್ ೨೦೦೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

—

ಚಂದಾ ವಿವರ :

ವಾರ್ಷಿಕ : ರೂ. ೧೦೦/-

ಅರ್ಧವಾರ್ಷಿಕ : ರೂ. ೫೦/-

ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)

ಕಲ್ಯಾಣಿ ಬೀದಿ,

ಮೇಲುಕೋಟೆ

ಜಿಲ್ಲಾ : ಮಂಡ್ಯ. ೫೭೧ ೪೩೧

ದೂರವಾಣಿ :

೦೮೨೩-೬೪೮೭೫೪

ಸರತಿಯ ಸಾಲಲಿ ಹರಿದಿಹ ಇರುವೆಯ
ನೋಡುತ ಪಾಠವ ಕಲಿಯುವೆನು
ಶಿಸ್ತಲಿ ಶ್ರಮದಲಿ ಕೆಲಸವ ಮಾಡಿ
ದೇಶದ ಪ್ರಗತಿಗೆ ದುಡಿಯುವೆನು!

ಬಾನಲಿ ಹಾರುವ ಹಕ್ಕಿಯ ಸಾಲನು
ನೋಡುತ ಪಾಠವ ಕಲಿಯುವೆನು
ಗೆಳೆಯರ ಜೊತೆಯಲಿ ಸ್ನೇಹದಿ ಸೇರಿ
ನಗುತಾ ನಲಿಯುತ ಸಾಗುವೆನು!

ಮುಳ್ಳಲಿ ಅರಳಿ ನಗುವಾ ಹೂವನು
ನೋಡುತ ಪಾಠವ ಕಲಿಯುವೆನು
ಕಷ್ಟದಿ ಕುಗ್ಗದೆ ಸುಖದಲಿ ಹಿಗ್ಗದೆ
ನಗುತಾ ನಗುತಾ ಬಾಳುವೆನು!

ಹಕ್ಕಿಗಳುಲಿಯನು ಮಧುರ ಸ್ವರವನು
ಕೇಳುತ ಪಾಠವ ಕಲಿಯುವೆನು
ವಿರಸವ ತೊರೆದು ಸರಸದಿ ನುಡಿಯುತ
ಎಲ್ಲರ ಜೊತೆ ಒಡನಾಡುವೆನು

ಹಣ್ಣಿನ ಮರವನು ಗದ್ದೆಯ ಬಯಲನು
ನೋಡುತ ಪಾಠವ ಕಲಿಯುವೆನು
ಎಲ್ಲರ ಹಿತವನು ಬಯಸುತ ಸಾಧಿಸಿ
ಜೀವನ ಯಾತ್ರೆಯ ಮಾಡುವೆನು!

ಪ್ರಕೃತಿಯ ನೋಡುತ ಪಾಠವ ಕಲಿತೆನು
ಪ್ರಕೃತಿಯ ದಯದಲಿ ಬಾಳುವೆನು
ಪ್ರಕೃತಿಯ ಉಳಿಸಿ ಬೆಳೆಸುವೆನು
ಜೊತೆಯಲಿ ನಾನೂ ಬಾಳುವೆನು

—ಎಸ್. ನಂಜುಂಡಸ್ವಾಮಿ

ವಿಚಾರ ದೀಪ್ತಿ......................

ಸಂತ ತುಕಾರಾಮರು ಹೇಳುತ್ತಾರೆ: ''ನಿಂದಕರು ತುಂಬಾ ಪರೋಪಕಾರಿಗಳು" ಅಗಸನಿಗಿಂತಲೂ ಉತ್ತಮರು! ಅಗಸನಿಗೆ ಒಗೆದು ದಕ್ಕೆ ಕೂಲಿ ಕೊಡಬೇಕು. ಆದರೆ ಈ ನಿಂದಕರು ಒಂದು ಕಾಸೂ ಕೇಳದೆ ಸಾಧಕನ ಸಮಸ್ತ ಅರೆ-ಕೊರೆಗಳನ್ನು ಸರಸರ ತೋರಿಸಿ ಸರಿಪಡಿಸಿಕೊಳ್ಳಲು ಉತ್ತಮ ಅವಕಾಶ ಕಲ್ಪಿಸಿಕೊಡುವರು!. ಪುರಂದರ ದಾಸರೂ "ನಿಂದಕರಿರಬೇಕಯ್ಯ ಕೇರಿಯು ಹಂದಿಯು ಹಾಗೆ" -ಎಂಬುದಾಗಿ ಅವರನ್ನು ಸ್ಮರಿಸುತ್ತಾರೆ. ಕಬೀರದಾಸರು ಒಂದು ದೋಹೆಯಲ್ಲಿ ನಿಂದಕರನ್ನು ಹತ್ತಿರವಿರಿಸಿಕೊಳ್ಳಲು ಹೇಳಿ "ಅವರು ಸಾಬೂನು ನೀರು ಇಲ್ಲದೆಯೇ ನಮ್ಮ ಮೈ-ಮನ, ನಡೆ-ನುಡಿ ಎಲ್ಲವನ್ನೂ ಶುಚಿಗೊಳಿಸುವರು" ಎನ್ನುತ್ತಾರೆ.

ಈ ಮಟ್ಟವನ್ನು ಮುಟ್ಟಲು ಅಸಾಮಾನ್ಯ ಹೃದಯ ವೈಶಾಲ್ಯ, ಅಸಾಧಾರಣ ಸಹಾನುಭೂತಿ, ಅನುಪಮ ಜ್ಞಾನಕಾಂತಿಯ ಆವಾಹನೆಯಾಗಬೇಕು. ಶ್ರೀಸಾಮಾನ್ಯರಿಗೆ ಇಂಥ ಮನೋಭೂಮಿಕೆಯಿರುವುದು ಕಷ್ಟ. ಆದರೂ ಅದಕ್ಕಾಗಿ ಪ್ರೀತಿಯಿಂದ ಪರಿಶ್ರಮಿಸುವುದು ದಿವ್ಯ ಜೀವನಕ್ಕೆ ನಾಂದಿಯಾದೀತು. ಇವರ ಬಗ್ಗೆ ಎಚ್ಚರವಿರಲಿ.

ಕೆಲವರಿರುತ್ತಾರೆ ಯಾರಿಗೆ ತಾವು ಸಹಾಯ ಮಾಡಿರುತ್ತಾರೆಯೋ ಅವರು ಜೀವನ ಪರ್ಯಂತ ತಮ್ಮ ದಾಸನಂತಿರಬೇಕೆಂದು ಬಯುಸುತ್ತಾರೆ. ತಾವು ಹೇಳಿದಂತೆ ಕೇಳದಿದ್ದರೆ. ಬಾಗದಿದ್ದರೆ, ವರ್ತಿಸದಿದ್ದರೆ ಅದು ಕೃತಜ್ಞತೆಯುಲ್ಲ ಎಂದು ಭಾವಿಸುತ್ತಾರೆ. ತಮ್ಮ ಅಭಿಪ್ರಾಯಕ್ಕೆ ಎದುರಾಡಿದರೆ ಅದು ಕೃತಘ್ನತೆಯ ಪರಮಾವಧಿ ಎಂದುಕೊಳ್ಳುತ್ತಾರೆ. ಇದರಿಂದ ಸಹಾಯ ಪಡೆಯುವುದಕ್ಕೆ ಬದಲಾಗಿ ಇದರಿಂದ ಸಹಾಯವಾಗುವುದರಿಂದ ದೂರವಿರುವುದೇ ಕ್ಷೇಮ. ಇಂಥವರು ಯಾರು, ಹೇಗಿರುತ್ತಾರೆ ಎಂಬ ವಿಷಯುವನ್ನು ತಿಳಿದುಕೊಳ್ಳಲು ಸಾರ್ವಜನಿಕ ಅಭಿಪ್ರಾಯುವೇ ಅತ್ಯಂತ ಸೂಕ್ತ ಮಾರ್ಗ: ಚೊಕ್ಕ ಮನದಿಂದ ಹದವರಿತು ಇತರರಿಗೆ (ಅನ್ಯ ಸಂದರ್ಭದಲ್ಲಿ) ಸಹಾಯ-ನೆರವು ಸಲಹೆ ನೀಡುವ ನರೋತ್ತಮರು ತಮ್ಮಿಂದ 'ಉದ್ಧಾರ'ವಾದವರನ್ನು ನೋಡಿ ಹಿಗ್ಗಿ ಹರಸುತ್ತಾರೆ ಅದರಿಂಪ ಯಾವ ಪ್ರತಿಫಲವನ್ನೂ ಅಪೇಕ್ಷಿಸುವುದಿಲ್ಲ ಅದು ಅವರ ಜಾಯಮಾನ ಅಷ್ಟೆ.

ಪ್ರಜಾಪ್ರತಿನಿಧಿಗಳ ದಾಸ್ಯಪ್ರವೃತ್ತಿ ಪ್ರಜಾಪ್ರಭುತ್ವಕ್ಕೆ ಕಳಂಕ

– ಸುರೇಂದ್ರ ಕೌಲಗಿ

ಈಗ ತಾನೆ ರಾಜ್ಯದ ಮುಖ್ಯ ಮಂತ್ರಿಗಳು ತಮ್ಮ ಮಂತ್ರಿಮಂಡಲವನ್ನು ಪುನರ್‌ರಚಿಸಿದರು. ಮಂತ್ರಿ ಮಂಡಲದ ಪುನರ್ ರಚನೆಯಾದ ನಂತರ ಮಂತ್ರಿ ಸ್ಥಾನಗಳನ್ನು ಪಡೆದ ಜನತಾಪ್ರತಿನಿಧಿಗಳು ಮುಖ್ಯ ಮಂತ್ರಿಯುವರಿಗೆ ತಮ್ಮ ಕೃತಜ್ಞತೆಯನ್ನು ತೋರಲು ಅವರ ಕಾಲಿಗೆರಗಿ ತಮ್ಮ ತಲೆಯಮೇಲೆ ಅವರ ಪಾದಧೂಳಿಯನ್ನು ಧರಿಸಿದರು! ಈ ಸುದ್ದಿಯನ್ನು ಓದಿದ ಸ್ವಾಭಿಮಾನಿ ಮತದಾರರಿಗೆ ಆಘಾತವುಂಟಾಯಿತು. ತಮ್ಮಿಂದ ಆಯ್ಕೆಗೊಂಡ ಪ್ರತಿನಿಧಿಗಳು ಎಷ್ಟೊಂದು ಅಧಿಕಾರ ಲಾಲಸೆಯುಳ್ಳವರಾಗಿರುತ್ತಾರೆಂದು ತಿಳಿದು ಅವರ ಬಗ್ಗೆ ಹೆಮ್ಮೆ ಅನಿಸುವುದರ ಬದಲು ಒಂದು ರೀತಿಯ ತಿರಸ್ಕಾರ ಮನೋಭಾವ ಮೂಡಿತು. ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯಲ್ಲಿ ಪ್ರಜಾಪ್ರತಿನಿಧಿಗಳು ಪ್ರಜೆಗಳ ಸ್ವಾಭಿಮಾನ, ಗೌರವ, ಘನತೆಗಳ ಪ್ರತೀಕರಾಗಿದ್ದಾರೆ. ಅಲ್ಲದೆ, ಪ್ರತಿನಿಧಿಗಳು ಕೂಡ ತಮ್ಮ ನಡೆನುಡಿಗಳಿಂದ, ವ್ಯವಹಾರಗಳಿಂದ ಪ್ರಜೆಗಳಲ್ಲಿ ಸ್ವಾಭಿಮಾನವನ್ನೂ, ಉನ್ನತ ಸಾಮಾಜಿಕ ಮೌಲ್ಯಗಳನ್ನೂ ನಿರ್ಮಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಹೀಗೆ ಮತದಾರರ ಮತ್ತು ಪ್ರತಿನಿಧಿಗಳ ಪರಸ್ಪರ ಶಿಷ್ಟ ಸಾರ್ವಜನಿಕ ವ್ಯವಹಾರಗಳ ಮೂಲಕ ಪ್ರಜಾಪ್ರಭುತ್ವವಾದಿ ಸಮಾಜದ ರಚನೆಯಾಗಬೇಕಾಗುತ್ತದೆ. ಆದರೆ ೫೦ ವರ್ಷಗಳ ಪ್ರಜಾತಂತ್ರ ವ್ಯವಸ್ಥೆಯ ನಂತರವೂ ನಮ್ಮ ದೇಶದಲ್ಲಿ ಆಗುತ್ತಿರುವುದೇನು? ಕೇಂದ್ರದಲ್ಲಿಯಾಗಲೀ, ರಾಜ್ಯಗಳಲ್ಲಾಗಲೀ ಮಂತ್ರಿ ಮಂಡಲದ ರಚನೆಯಾದಾಗಲೆಲ್ಲ ಮಂತ್ರಿಸ್ಥಾನ ಪಡೆದವರು ಪ್ರಧಾನಮಂತ್ರಿಯ ಅಥವಾ ಮುಖ್ಯಮಂತ್ರಿಯ ಪಾದಗಳಿಗೆ ಎರಗುವುದು ಹಾಗೂ ಮಂತ್ರಿ ಮಂಡಲದಲ್ಲಿ ಸ್ಥಾನ ಪಡೆಯದೇ ಇರುವವರು 'ಗಳೋ' ಎಂದು ಅಳುವುದು ಇಲ್ಲವೆ ತಮ್ಮ ನಾಯಕನ ವಿರುದ್ಧ ಬಂಡಾಯವೇಳುವುದು ಸರ್ವೇ ಸಾಮಾನ್ಯವಾಗಿದೆ. ಎಷ್ಟೋ ಸಲ ಅಸಂತುಷ್ಟರೆಲ್ಲ ಸೇರಿ ತಮ್ಮದೇ ಆದ ರಾಜಕಿಯ ಪಕ್ಷವನ್ನು ಕೂಡ ರಚಿಸಿಕೊಳ್ಳುವಷ್ಟು ದೂರ ಹೋಗುತ್ತಾರೆ. ಈ ಸಂಗತಿಗಳಿಂದ ನಮಗೆ ಸ್ಪಷ್ಟವಾಗಿ ಗೊತ್ತಾಗುವುದೇನೆಂದರೆ ಜನತಾ ಪ್ರತಿನಿಧಿಗಳು ಅಧಿಕಾರ ಸ್ಥಾನವಿಲ್ಲದೆ ಒಂದು ಕ್ಷಣವೂ ಬದುಕಲಾರರು! ಒಂದಲ್ಲ ಒಂದು ಅಧಿಕಾರ ಸ್ಥಾನ ಅವರಿಗೆ ಬೇಕೆ ಬೇಕು. ಶಾಸಕರಾಗದೆ, ಮಂತ್ರಿಯಾಗದೆ ಅಥವಾ ಯಾವುದಾದರೊಂದು ನಿಗಮ ಇಲ್ಲವೆ ಮಂಡಳಿಯ ಅಧ್ಯಕ್ಷರಾಗದೆ ಸೇವೆ ಮಾಡಲು ಸಾಧ್ಯವಿಲ್ಲ ಎಂಬ ಸಿದ್ಧಾಂತವನ್ನು ಅವರು ನಂಬಿದಂತಿದೆ. ಆದ್ದರಿಂದ ಅಧಿಕಾರ

ಸ್ಥಾನ ಪಡೆಯುವುದಕ್ಕಾಗಿ ಎಂಥ ಕೀಳರಿಮೆಯನ್ನೂ ಅವರು ಬೆಳೆಸಿಕೊಳ್ಳಲು
ಸಿದ್ಧರಾಗುತ್ತಾರೆ. ಜನತಾ ಪ್ರತಿನಿಧಿಗಳ ಈ ಮನೋಭಾವ ಪ್ರಜಾತಂತ್ರ
ವ್ಯವಸ್ಥೆಯಲ್ಲಿ ಎಂಥ ವಿಪರ್ಯಾಸದಿಂದ ಕೂಡಿದೆ ಎಂಬ ಅರಿವೇ ಅವರಿಗಿಲ್ಲ
ವಾಗಿದೆ. ಅತಿಯಾದ ಅಧಿಕಾರದಾಹದೊಳಗೆ ಪ್ರಜಾಪ್ರಭುತ್ವಕ್ಕೆ ಧಕ್ಕೆಯನ್ನುಂಟು
ಮಾಡುವ ಅಂಶಗಳಿವೆ ಎಂಬುದನ್ನು ಜನತಾ ಪ್ರತಿನಿಧಿಗಳೂ ಮತ್ತು ಅವರನ್ನು
ಆಯ್ಕೆ ಮಾಡುವ ಜನತೆಯೂ ತಿಳಿದುಕೊಳ್ಳಬೇಕಾಗಿದೆ. ಈ ಕುರಿತಾದ
ತಿಳುವಳಿಕೆ ಇಬ್ಬರಲ್ಲಿಯೂ ಇಲ್ಲದಿರುವುದರಿಂದಲೇ ಸಾರ್ವಜನಿಕ ಜೀವನದಲ್ಲಿ,
ಆಡಳಿತದಲ್ಲಿ, ರಾಜಕಾರಣದಲ್ಲಿ, ರಕ್ಷಣಾವ್ಯವಸ್ಥೆಯಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಭ್ರಷ್ಟಾ
ಚಾರ ವ್ಯಾಪಕವಾಗಿ ಹರಡಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲು
ಮತ್ತು ಚುನಾವಣೆಗಳು ಪ್ರಾರಂಭವಾಗುವ ಮೊದಲು ಸಾರ್ವಜನಿಕ ಸೇವಾ
ಕ್ಷೇತ್ರದಲ್ಲಿ ಅಧಿಕಾರ ಸ್ಥಾನ, ಮತ್ತು ಸಂಗ್ರಹ ಪ್ರವೃತ್ತಿ ಇವೆರಡೂ
ಒಟ್ಟಿಗೆ ಇರಲಾರವೆಂಬ ಸಿದ್ಧಾಂತ ಪ್ರಚಾರದಲ್ಲಿತ್ತು. ರಾಜ
ರಾಮ ಮೋಹನರಾಯ್‌ರಿಂದ ಪ್ರಾರಂಭವಾದ ಸಾಮಾಜಿಕ ಪುನರುಜ್ಜೀವನದ
ಕಾಲದಿಂದ ಹಿಡಿದು ೧೯೭೪ರ ವೇಳೆಗೆ ಜಯಪ್ರಕಾಶ ನಾರಾಯಣರಿಂದ
ಪ್ರಾರಂಭವಾದ 'ಸಂಪೂರ್ಣಕ್ರಾಂತಿ'ಯ ವರೆಗೆ ಸಾರ್ವಜನಿಕ ನಾಯಕತ್ವದ
ಪ್ರಾಪ್ತಿ ಸೇವೆಯ ಮೂಲಕವೇ ಹೊರತು ಅಧಿಕಾರ ಸ್ಥಾನಗಳ ಮೂಲಕವಲ್ಲ
ಎಂಬ ಮೌಲ್ಯವು ಪ್ರತಿಪಾದಿಸಲ್ಪಡುತ್ತಾ ಬಂದಿತ್ತು. ಆದರೆ ದುರ್ದೈವದ
ಸಂಗತಿಯೇನೆಂದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಅಡಿಪಾಯದ ರೂಪ
ದಲ್ಲಿ ೧೯೫೦ರ ದಶಕಗಳಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ಪ್ರಾರಂಭಿಸಿದ
ಕೂಡಲೆ ಸಾರ್ವಜನಿಕ ಜೀವನ ಅಪಮೌಲ್ಯಗೊಳ್ಳುತ್ತ ಬಂತು ಮತ್ತು ಈಗ
ಅದು ತನ್ನ ಪರಾಕಾಷ್ಠತೆಯನ್ನು ಮುಟ್ಟಿದೆ. ಸಾರ್ವಜನಿಕ ಜೀವನದ ಮಹಾನ್
ಸೇವಕರಾದ ಬಾಲಗಂಗಾಧರ್ ತಿಲಕ್, ಗೋಪಾಲಕೃಷ್ಣ ಗೋಖಲೆ, ವಲ್ಲಭ
ಭಾಯಿ ಪಟೇಲ್, ಸಿ. ರಾಜಗೋಪಾಲಾಚಾರಿ, ಡಾ॥ ರಾಜೇಂದ್ರಪ್ರಸಾದ್, ಎಂ.
ವಿಶ್ವೇಶ್ವರಯ್ಯ, ವಿನೋಬಾ ಭಾವೆ, ಲಾಲ್ ಬಹದ್ದೂರ್‌ಶಾಸ್ತ್ರಿ, ಜಯಪ್ರಕಾಶ್
ನಾರಾಯಣ್ ಮತ್ತು ಮಹಾತ್ಮಾ ಗಾಂಧೀಯಂಥ ಇನ್ನೂ ಅನೇಕ ಮಹನಿ
ಯರ ಉದಾಹರಣೆಗಳು ನಮ್ಮ ಇಂದಿನ ಸಾರ್ವಜನಿಕ ಜೀವನದಿಂದ ಕಣ್ಮರೆ
ಯಾಗಿವೆ. ಆದ್ದರಿಂದ ಇಂದು ಸೇವಾ ಬಲಕ್ಕಿಂತ ಅಧಿಕಾರ ಬಲ ದೊಡ್ಡ
ದಾಗಿ ಪರಿಣಮಿಸಿದೆ. ಇಂಥ ಒಂದು ಬೆಳವಣಿಗೆಗೆ ಕಾರಣವೇನೆಂದರೆ ನಾವು ಇಟ್ಟು
ಕೊಂಡಿರುವ ತಲೆಕೆಳಗಾದ ಪ್ರಜಾಪ್ರಭುತ್ವ ವ್ಯವಸ್ಥೆ. ಈಜಿಪ್ತ ದೇಶದಲ್ಲಿ
ಬಹಳ ಪ್ರಾಚೀನವಾದ ಪಿರಾಮಿಡ್‌ಗಳಿವೆ. ಅವುಗಳ ರಚನೆಯನ್ನು ನೋಡಿ
ದಾಗ ನಮಗೆ ಅವು 'ಇಷ್ಟೊಂದು ದೀರ್ಘಕಾಲ ಸುಭದ್ರವಾಗಿ ನಿಂತುಕೊಂಡಿ
ರಲು ಕಾರಣವೇನೆಂಬುದು ಗೊತ್ತಾಗುತ್ತದೆ. ಆ ಪಿರಾಮಿಡ್‌ಗಳ ಅಡಿಪಾಯ

ವಿಸ್ತಾರವಾಗಿದೆ ಮತ್ತು ಕಟ್ಟಡ ಮೇಲಕ್ಕೆ ಹೋದಂತೆ ಅದರ ವಿಸ್ತಾರ ಕಡಿಮೆಯಾಗುತ್ತ ಹೋಗಿ ತುದಿಯಲ್ಲಿ ಮೊನಚಾಗಿರುತ್ತದೆ. ಅಂದರೆ ಕಟ್ಟಡದ ಮುಖ್ಯ ಭಾರ ಅಡಿಯಲ್ಲಿ ಇದೆಯೇ ಹೊರತು ಮೇಲಲ್ಲ. ಯಾವುದೇ ಆಡಳಿತ ಪದ್ಧತಿ ಅಥವಾ ಸರ್ಕಾರ ಈ ಪಿರಾಮಿಡ್‌ಗಳ ರೀತಿಯಲ್ಲಿಯೇ ಇರಬೇಕು. ಅಂದರೆ ಆಡಳಿತ ಮೇಲಿನಿಂದ ಕೆಳಗಿನವರೆಗೆ ವಿಕೇಂದ್ರಿತಗೊಳ್ಳುತ್ತ ಹೋಗಬೇಕು. ಅಧಿಕಾರದ ಕೇಂದ್ರೀಕರಣವೆಂದರೆ ಕಡಿಮೆ ವಿಸ್ತಾರದ ಅಡಿಪಾಯದ ಮೇಲೆ ಬಹಳ ಭಾರವಾದ ಕಟ್ಟಡ ಕಟ್ಟಿದಂತೆ. ಇಂಥ ತಲೆಕೆಳಗಾದ ಆಡಳಿತ ಪದ್ಧತಿಯನ್ನು ನಾವು ಹೊಂದಿರುವುದರಿಂದ ಪ್ರಜೆಗಳಲ್ಲಿ ನಿಜವಾಗಿ ಇರಬೇಕಾದ ಅಧಿಕಾರವು ಶಾಸಕರಲ್ಲಿ, ಮಂತ್ರಿಗಳಲ್ಲಿ, ನಿಗಮ-ಮಂಡಳಿಗಳ ಅಧ್ಯಕ್ಷರುಗಳ ಕೈಯಲ್ಲಿ ಸೇರಿಕೊಂಡಿದೆ. ಪ್ರಜೆಗಳು ಸೇವಕರಾಗಿದ್ದಾರೆ, ಮಂತ್ರಿಗಳು, ಅಧಿಕಾರಿಗಳು ಯಜಮಾನರಾಗಿದ್ದಾರೆ. ಪ್ರಜೆಗಳು ಪರಾವಲಂಬಿಗಳಾಗಿದ್ದಾರೆ. ಜನತಾ ಪ್ರತಿನಿಧಿಗಳು ಪರೋಪಹಾರ ಜೀವಿಗಳಾಗಿದ್ದಾರೆ! ನಮ್ಮ ಇಂದಿನ ರಾಜ್ಯವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳಿಗೆ ಆಧುನಿಕ ಸೌಕರ್ಯಗಳಿರಬೇಕೆಂಬ ವಿಚಾರದ ಅಡಿಯಲ್ಲಿ ಅವರನ್ನು ಭೋಗಜೀವನಕ್ಕೆ ತಳ್ಳಿದ್ದೇವೆ. ಪ್ರಜೆಗಳಿಗಿಲ್ಲದ ಅನುಕೂಲತೆಗಳು, ಆದಾಯಗಳು ಅವರ ಪ್ರತಿನಿಧಿಗಳಿಗಿವೆ. ಎಲ್ಲರೂ ಸಮಾನರು ಎಂಬ ರಾಜ್ಯನೀತಿ ಜಾರಿಗೆ ಬಂದಿದ್ದರೂ ಕೆಲವರು ಹೆಚ್ಚು ಸಮಾನರು ಎಂಬ ನೀತಿ ಅನುಸರಣೆಯಲ್ಲಿದೆ! ಅಧಿಕಾರ, ಹಣ, ದರ್ಪ, ಸೌಕರ್ಯ ಇತ್ಯಾದಿಗಳು ಕೈಸೇರಿದ ಮೇಲೆ ಪ್ರತಿನಿಧಿ ಅವುಗಳನ್ನು ಕಳೆದುಕೊಳ್ಳಲು ಮತ್ತು ಅದಕ್ಕೆ ಮೂಲಾಧಾರವಾದ ಮಂತ್ರಿಗಿರಿಯನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಸಾರ್ವಜನಿಕ ಜೀವನದ ಮೇಲೆ ಆಗಬಹುದಾದ ಇಂಥ ದುಷ್ಪರಿಣಾಮಗಳನ್ನು ಅರಿತೇ ಗಾಂಧೀಜಿಯವರು ಮಂತ್ರಿಗಳು ಹೇಗಿರಬೇಕೆಂಬ ಬಗ್ಗೆ ಸ್ವಾತಂತ್ರ್ಯಕ್ಕೆ ಮೊದಲೇ ತಿಳಿಸಿದ್ದಾರೆ. ಅವರು ಹೇಳಿದ ಮಾತುಗಳು ಈಗ ಅವ್ಯವಹಾರಿಕ ಅನಿಸಿದರೂ ಆ ಮಾತುಗಳ ಹಿಂದಿರುವ ಆಶಯಗಳು ಈಗಲೂ ಪ್ರಸ್ತುತವಾಗಿವೆ ಯೆಂದು ಅನಿಸದೇ ಇರಲಾರದು. ಈ ವಿಷಯವಾಗಿ ಗಾಂಧೀಜಿ ಹೀಗೆ ಹೇಳಿದ್ದಾರೆ:- “ಶಾಸನ ಸಭೆಗಳ ಹೊರಗೆ ಇದ್ದುಕೊಂಡೇ ಉತ್ತಮವಾದ ದೇಶ ಸೇವೆಯನ್ನು ಮಾಡಬಹುದು, ಶಾಸಕರಲ್ಲಿರುವ ಅಧಿಕಾರದ ದಾಹವನ್ನು ಸುರಾಪಾನದ ದಾಹಕ್ಕೆ ಹೋಲಿಸಬಹುದು.” ಇಲ್ಲಿ ಮೊರಾರ್ಜಿ ದೇಸಾಯಿಯವರ ಒಂದು ಉದಾಹರಣೆ ಜ್ಞಾಪಕಕ್ಕೆ ಬರುತ್ತದೆ. ಪ್ರಧಾನ ಮಂತ್ರಿಯಾಗಿದ್ದ ಲಾಲಬಹಾದ್ದೂರ ಶಾಸ್ತ್ರಿಯವರು ರಶಿಯಾದ ತಾಷ್ಕೆಂಟಿನಲ್ಲಿ ತೀರಿಕೊಂಡಾದ ಮೇಲೆ ಯಾರು ಪ್ರಧಾನಮಂತ್ರಿಯಾಗಬೇಕೆಂಬ ಚರ್ಚೆ ಲೋಕಸಭೆಯಲ್ಲಿ ಪ್ರಾರಂಭವಾಯಿತು. ಮೊರಾರ್ಜಿ ದೇಸಾಯಿಯವರ ಹೆಸರು ಮತ್ತು ಇಂದಿರಾಗಾಂಧಿ

ಯುವರ ಹೆಸರುಗಳು ಪ್ರಸ್ತಾಪಿಸಲ್ಪಟ್ಟವು. ಆಗ ಕೆಲವರು ದೇಸಾಯಿಯುವರಿಗೆ ಒಂದು ಸಲಹೆ ಕೊಟ್ಟರು. "ನೀವು ಎಲ್ಲ ಲೋಕಸಭಾ ಸದಸ್ಯರನ್ನು ಭೇಟಿಮಾಡಿ ಅವರ ಮತವನ್ನು ಯಾಚಿಸಿದರೆ ನೀವು ಪ್ರಧಾನ ಮಂತ್ರಿಯಾಗುವುದು ಖಂಡಿತ." ಈ ಸಲಹೆಯನ್ನು ತಳ್ಳಿ ಹಾಕಿದ ದೇಸಾಯಿಯುವರು "ಸದಸ್ಯರಿಗೆ ನನ್ನ ಯೋಗ್ಯತೆಯಲ್ಲಿ ನಂಬಿಕೆಯಿದ್ದರೆ ಮತ ಕೊಡುತ್ತಾರೆ. ನಾನು ಮಾತ್ರ ಮತವನ್ನು ಯಾಚಿಸುವುದಿಲ್ಲ" ಎಂದು ಉತ್ತರಕೊಟ್ಟರು," ಅದರ ಪರಿಣಾಮ ವಾಗಿ ಅವರು ಪ್ರಧಾನಿ ದಟ್ಟ ಕಳೆದುಕೊಂಡರು. ಇಂದಿರಾ ಗಾಂಧೀ ಪ್ರಧಾನಿ ಯಾದರು. ಮುಂದೆ ಅವರು ಪ್ರಜಾ ಪ್ರಭುತ್ವಕ್ಕೆ ಕಂಟಕರಾದರು. ಈ ಘಟನೆಯ ಹಿಂದೆ ಇರುವ ನೀತಿಪಾಠವೇನೆಂದರೆ "ಯಾವುದೇ ಒಬ್ಬ ವ್ಯಕ್ತಿ ಅಧಿಕಾರ ಸ್ಥಾನ ಪಡೆಯಬೇಕಾದರೆ ಅವನ ಸಾಮರ್ಥ್ಯ ಅಳತೆಗೋಲಾಗಬೇಕಲ್ಲದೆ ಮತ ಯಾಚಿಸುವ ಸಾಮರ್ಥ್ಯವಲ್ಲ ಮತ್ತು ಅದಕ್ಕಾಗಿ ತನ್ನ ಸ್ವಾಭಿಮಾನವನ್ನು ಕುಂಠಿತಗೊಳಿಸಬೇಕಾಗಿಲ್ಲ". ಇದೇ ಸಂದರ್ಭದಲ್ಲಿ ಲಾಲ್ ಬಹದ್ದೂರ ಶಾಸ್ತ್ರಿಯವರ ಉನ್ನತ ನಡವಳಿಕೆಯೊಂದು ಜ್ಞಾಪಕಕ್ಕೆ ಬರುತ್ತದೆ. ನೆಹರೂ ಸರ್ಕಾರದಲ್ಲಿ ಶಾಸ್ತ್ರಿಯವರು ರೈಲು ಮಂತ್ರಿಯಾಗಿದ್ದರು. ಆಗ ದೂರದ ತಮಿಳುನಾಡಿನಲ್ಲಿ ರೈಲು ಅಪಘಾತವಾಯಿತು. ಆ ಅಪಘಾತಕ್ಕೆ ತಾವು ನೈತಿಕ ವಾಗಿ ಹೊಣೆಯೆಂದು ಭಾವಿಸಿಕೊಂಡು ಶಾಸ್ತ್ರಿಯವರು ತಮ್ಮ ಕೇಂದ್ರ ಸರ್ಕಾರದಲ್ಲಿಯ ಮಂತ್ರಿಪದವಿಗೆ ರಾಜೀನಾಮೆಕೊಟ್ಟರು. ಈ ಘಟನೆಯ ಹಿಂದೆ ಇರುವ ನೀತಿ ಪಾಠವೇನೆಂದರೆ ಅಧಿಕಾರಕ್ಕಿಂತ ಜನರ ಕಲ್ಯಾಣ ಮುಖ್ಯ ಎಂಬ ಮೌಲ್ಯ. ಅದರೆ ಇಂದಿನ ರಾಜಕಾರಣದಲ್ಲಿ ಮಮತಾ ಬ್ಯಾನರ್ಜಿ ಅದೇ ರೈಲ್ವೆ ಇಲಾಖೆಯ ಮಂತ್ರಿಯಾಗಲು ಹಾತೊರೆಯುತ್ತಿದ್ದಾರೆ. ಮತ್ತು ಅದನ್ನು ತಮ್ಮ ರಾಜಕೀಯ ಉದ್ದೇಶ್ಯಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಹಾಗೂ ಕೇಂದ್ರದಲ್ಲಿಯ ಎನ್‌ಡಿಎ ಸರ್ಕಾರವನ್ನು ಬಿಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ಜಯಪ್ರಕಾಶ ನಾರಾಯಣರು ಸಹ ಒಂದು ಉದಾತ್ತವಾದ ಉದಾಹರಣೆಯನ್ನು ನಮ್ಮ ಮುಂದೆ ಇಟ್ಟು ಹೋಗಿದ್ದಾರೆ. ಜವಾಹರಲಾಲ್ ನೆಹರೂ ಜಯಪ್ರಕಾಶರನ್ನು ಉಪಪ್ರಧಾನಿಯಾಗಲು ಕರೆದರು. ಆದರೆ ಅವರು ಆ ಅಧಿಕಾರವನ್ನು ಸ್ವೀಕರಿಸದೆ ಜನತೆಯ ಮಧ್ಯ ಇದ್ದುಕೊಂಡು ಪ್ರಜಾ ಪ್ರಭುತ್ವದ ಸರಾಗವಾದ ನಿರ್ವಹಣೆಗೆ ಮತ್ತು ಜನತೆಯ ಸ್ವಾತಂತ್ರ್ಯಕ್ಕೆ ಆಗತ್ಯವಾದ ಲೋಕಶಕ್ತಿಯನ್ನು ನಿರ್ಮಿಸಲು ಪ್ರಯತ್ನಿಸಿದರು. ಅವರು ತಮ್ಮ ಇಡೀ ಸಾರ್ವಜನಿಕ ಜೀವನದಲ್ಲಿ ಒಮ್ಮೆಯಾದರೂ ಅಧಿಕಾರ ಪ್ರಾಪ್ತಿ ಗಾಗಿ ಯಾರ ಬಳಿಗೂ ಹೋಗಲಿಲ್ಲ, ಯಾರ ಕಾಲನ್ನೂ ಹಿಡಿಯಲಿಲ್ಲ. ಕೇವಲ ತಮ್ಮ ಸೇವಾಬಲದಿಂದ, ತ್ಯಾಗದ ಬಲದಿಂದ ಭಾರತ ದೇಶದ ಅದ್ವಿತೀಯ

ನಾಯಕರಾದರು, ಲೋಕನಾಯಕರಾದರು. ಸತ್ಯ, ಅಹಿಂಸೆ, ಖಾದಿ ಮುಂತಾದ ತಮ್ಮ ಸಿದ್ಧಾಂತಗಳನ್ನು ಒಪ್ಪದ ಕಾಂಗ್ರೆಸ್ ಸಂಘಟನೆಯನ್ನು ತೊರೆದ ಗಾಂಧೀ ದೇಶದ ಪ್ರಧಾನಿಯಾಗಲಿಲ್ಲ, ಬದಲಿಗೆ ರಾಷ್ಟ್ರಪಿತಾ ಆದರು, ಮಹಾತ್ಮ ಆದರು. ಈ ಎಲ್ಲ ಮಹಾನ್ ಹಾಗೂ ನಿಜವಾದ ಜನತಾ ಪ್ರತಿನಿಧಿಗಳೆಲ್ಲಿ ಮತ್ತು ನಮ್ಮ ಇಂದಿನ ಮತಯಾಚನೆಯ, ಮಂತ್ರಿಗಿರಿಯಾಚನೆಯ ಜನತಾ ಪ್ರತಿ ನಿಧಿಗಳಲ್ಲಿ?

ಇಂದು ರಾಜಕಾರಣದಲ್ಲಿರುವ ಅಧಿಕಾರದಾಹದ ಈ ದುರಂತವನ್ನು ತಪ್ಪಿಸುವುದೇ ಜಯಪ್ರಕಾಶರ "ಸಂಪೂರ್ಣಕ್ರಾಂತಿಯ" ಉದ್ದೇಶ್ಯವಾಗಿತ್ತು. ★

✲ ✲ ✲

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ-ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/-ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ. -ಪ್ರಕಾಶಕರು

ಕನ್ನಡ ಕಂಪ್ಯೂಟರೀಕರಣದ ಕರ್ತೃ ಬರಹಬ್ರಹ್ಮ ವಾಸು

ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟದ ಸನ್ಮಾನದ ಬೆಳಕಿನಲ್ಲಿ ಶೇಷಾದ್ರಿ ವಾಸು! ಅಂದಹಾಗೆ. ಅವರ ಅಗ್ಗಳಿಕೆಯಾದರೂ ಏನು?

ಮೂರು ದಶಕಗಳ ಹಿಂದೆ ಬೆಂಗಳೂರು ಸುಭಾಷ್‌ನಗರ ಬಸ್ ನಿಲ್ದಾಣ ದಲ್ಲಿ ಬಸ್ಸಿನಿಂದಿಳಿದೊಡನೆ ಕಿವಿಗಳಿಗೆ ತಟ್ಟುತ್ತಿದ್ದುದು ಪಿ.ಬಿ. ಶ್ರೀನಿವಾಸ್‌ರ ಸುಮಧುರ ಕಂಠದಿಂದ ಹೊರಹೊಮ್ಮುತ್ತಿದ್ದ 'ನಾವಾಡುವ ನುಡಿಯೇ ಕನ್ನಡ ನುಡಿ.' ಪ್ರಸ್ತುತ ಬೆಂಗಳೂರಿನ ವಿದೇಶಿ ಕಂಪೆನಿಗಳ ದೈತ್ಯ ಕಟ್ಟಡಗಳ ನಡುವೆ ಇಂಗಾಲಾಮ್ಲದ ಕಂಪಿನ ನಡುವೆ ಕಿವಿಗಪ್ಪಳಿಸುತ್ತಿರುವುದು ಅಮೆರಿಕದ 'ಬ್ಯಾಕ್ ಸ್ಟ್ರೀಟ್ ಬಾಯ್ಸ್'ರ ಪಾಶ್ಚಿಮಾತ್ಯ ಸಂಕೀರ್ತನೆ. ಇದು ನಮಗೆ ಪ್ರಗತಿಯ ಹೆಸರಿನಲ್ಲಿ ಬಂದ ಬಾಯಿಂದಾನ.

ವೈಜ್ಞಾನಿಕವಾಗಿ ಮುಂದುವರಿಯಲು ಆಂಗ್ಲಭಾಷೆಗೆ ದುಂಬಾಲು ಬಿದ್ದ ಬುದ್ಧಿಜೀವಿಗಳು, ಕನ್ನಡಿಗರಾಗಿ ಕನ್ನಡ ಬರುವುದಿಲ್ಲ (ಅಥವಾ ಮರೆತು ಹೋಗಿದೆ) ಎಂದು ಪಶ್ಚಾತ್ತಾಪಿಸುವುದು ಶೋಕಿಯಾಗಿದೆ. ಅದಲ್ಲದೆ ಹಲವಾರು ವರ್ಷ ಉನ್ನತ ಶಿಕ್ಷಣವನ್ನು ಇಂಗ್ಲಿಷಿನಲ್ಲಿ ಪಡೆದು ನಂತರ ದಿನನಿತ್ಯದ ಉದ್ಯೋಗ ಕ್ಕಾಗಿ ಇಂಗ್ಲಿಷನ್ನೇ ಬಳಸುವುದರಿಂದ ಕನ್ನಡ ಮರೆತು (ಮರೆಯಾಗಿ) ಹೋಗು ವುದು ಸಹಜ ಎಂಬ ಸಮರ್ಥನೆ ಬೇರೆ. ಇಂತಹ ಕನ್ನಡಿಗ ಬುದ್ಧಿಜೀವಿಗಳಿಗೆ ಸವಾಲಾಗಿ, ತಾನು ಪಡೆದ ವೈಜ್ಞಾನಿಕ ಸಂಪತ್ತಿನಿಂದ ಕನ್ನಡದ ಪ್ರಚಾರಕ್ಕಾಗಿ ಹಾಗೂ ಏಳಿಗೆಗಾಗಿ, ಕನ್ನಡ ಪ್ರಚಾರ ಮಾಧ್ಯಮಕ್ಕೆ ಕೊಡುಗೆಯಾಗಿ ಬಳವಳಿ ಇತ್ತವರು ನಮ್ಮವರೇ ಆದ 'ಬರಹ' ತಂತ್ರಾಂಶದ (ಸಾಫ್ಟ್‌ವೇರ್) ಕರ್ತೃ ಶೇಷಾದ್ರಿ ವಾಸು ಚಂದ್ರಶೇಖರ್ ಅವರು.

ಪ್ರತಿಭಾವಂತ ವಿದ್ಯಾರ್ಥಿ, ಕನ್ನಡ ಪ್ರೇಮಿ

'ಬರಹ'ದ ವಾಸು ಎಂದೇ ಪ್ರಖ್ಯಾತರಾದ ವಾಸು ಅವರಿಗೆ ಕನ್ನಡದ ಮೇಲಿನ ಪ್ರೇಮ ಹುಟ್ಟಿನಿಂದಲೂ ರಕ್ತಗತ. ಬಾಲ್ಯದಿಂದಲೂ ಬಹಳ ಬುದ್ಧಿ ಶಾಲಿಯಾದ ವಾಸು, ರಾಜ್ಯಮಟ್ಟದ ಪಿ.ಯು.ಸಿ. ಪರೀಕ್ಷೆಯಲ್ಲಿ ರ್‍ಯಾಂಕ್ ವಿಜೇತರು. ಅದಲ್ಲದೆ ತಮ್ಮ ಎಂಜಿನಿಯರಿಂಗ್ ಪದವಿ ಪರೀಕ್ಷೆಯ ಎಲೆಕ್ಟ್ರಾನಿಕ್ ವಿಭಾಗದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಸಂಪಾದಿಸಿದವರು.

ನಂತರ ಭಾರತದ ಪ್ರತಿಷ್ಠಿತ ತಾಂತ್ರಿಕ ವಿದ್ಯಾಲಯವಾದ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸ್)ನಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ತದನಂತರ ಅವರು ಅನೇಕ ಗಣಕ ಯಂತ್ರದ ತಂತ್ರಾಂಶ ವಿನ್ಯಾಸದ ಕಂಪನಿಗಳಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿದವರು. ಈ ಸಮಯದಲ್ಲಿ ಅವರಿಗೆ ಹೊಳೆದ ವಿಚಾರವೆಂದರೆ ಒಂದು ಸರಳ ಸುಲಭವಾದ ಕನ್ನಡ ಮುದ್ರಣೋಪಯೋಗಿ (ಡೆಸ್ಕ್ ಟಾಪ್ ಪಬ್ಲಿಷಿಂಗ್, ಡಿಟಿಪಿ) ತಂತ್ರಾಂಶದ ಕೊರತೆ ಕನ್ನಡವನ್ನು ಕಾಡುತ್ತಿರುವುದು. ಅಂತರ್ಜಾಲದ ಈ ಬ್ರಹ್ಮಾಂಡದಲ್ಲಿ ಬೇರೆಲ್ಲಾ ಭಾಷೆಗಳ ಪತ್ರಗಳು ಲೀಲಾಜಾಲವಾಗಿ ಪ್ರಕಟಗೊಂಡು ಮೆರೆಯುತ್ತಿರುವಾಗ, ಇಲ್ಲಿ ಕನ್ನಡದ ಅನುಪಸ್ಥಿತಿ ಅವರನ್ನು ಸದಾ ಕಾಡುತ್ತಿತ್ತು. ಈ ಸಮಸ್ಯೆ ನಿವಾರಿಸುವ ಉದ್ದೇಶದಿಂದ ಸ್ನೇಹಿತರಿಂದ ಉತ್ತೇಜಿತರಾಗಿ ತಮ್ಮ ಬಿಡುವಿನ ಸಮಯದಲ್ಲಿ ಆಧುನಿಕ ತಂತ್ರಜ್ಞಾನ, ಕನ್ನಡದ ಬಳಕೆ ಹಾಗೂ ವ್ಯಾಕರಣವನ್ನು ಒಟ್ಟಾಗಿಸಿ ಆಧುನಿಕ ಜಗತ್ತಿಗೆ ಕೊಡುಗೆಯಾಗಿ ಇತ್ತರು- 'ಬರಹ'ವನ್ನು.

ಅವರ ಈ ಕೊಡುಗೆಯಿಂದ, ಇಂದು ಲಕ್ಷಾಂತರ ಕನ್ನಡಾಭಿಮಾನಿಗಳ ಕೈಯಲ್ಲಿ ಕನ್ನಡ ವಿ-ಅಂಚೆ (ಇ ಮೇಲ್), ಕನ್ನಡ ಅಂತರಜಾಲ ತಾಣಗಳ ಮೂಲಕ ಜಗತ್ತಿನ ಮೂಲೆ ಮೂಲೆಗೆ ಕನ್ನಡದ ಕಂಪು ಹರಡಿದೆ. ಇಂದು ಬರಹವನ್ನು ಸರಕಾರಿ ಕಚೇರಿಗಳು, ಕನ್ನಡ ಕೂಟಗಳು, ಶಾಲೆ ಕಾಲೇಜುಗಳು ಬ್ಯಾಂಕುಗಳೂ ಸೇರಿದಂತೆ ಸಹಸ್ರಾರು ಸಂಘ-ಸಂಸ್ಥೆಗಳು ಬಳಸುತ್ತಿವೆ.

ಲಿಪ್ಯಂತರೀಕರಣ : 'ಬರಹ' ಒಂದು ಲಿಪ್ಯಂತರೀಕರಣ (ಟ್ರಾನ್ಸ್‌ಲಿಟರೇಶನ್) ತಂತ್ರಾಂಶ (ಸಾಫ್ಟ್‌ವೇರ್). ಉಚ್ಚಾರಣೆಯನ್ನು ಅನುಸರಿಸಿ, ಒಂದು ಭಾಷೆಯಲ್ಲಿ ಬರೆದುದನ್ನು ಇನ್ನೊಂದು ಭಾಷೆಯ 'ಲಿಪಿ'ಯಲ್ಲಿ ಪರಿವರ್ತಿಸಿ ಬರೆಯುವುದು ಲಿಪ್ಯಂತರೀಕರಣ. ಉಚ್ಚಾರಕ್ಕನುಗುಣವಾಗಿ ಕೀಲಿ-ಮಣೆಯಲ್ಲಿ ಆಂಗ್ಲಭಾಷೆಯ ಅಕ್ಷರವನ್ನು ಒತ್ತುತ್ತಿದ್ದಂತೆ, ಮುದ್ದಾದ ಸವಿಗನ್ನಡದ ಆಕ್ಷರಗಳು ಕಣ್ಣಮುಂದೆ ಚಿಗುರೊಡೆಯುತ್ತದೆ. ಇದರ ಮೂರು ಉದ್ದೇಶಗಳೆಂದರೆ:-

೧. ಸರಳ ಸುಲಭವಾದ ಗಣಕ ಮುದ್ರಣ (ಡಿಟಿಪಿ);

೨. ಅಂತರ್ಜಾಲದಲ್ಲಿ ಸುಲಭವಾಗಿ ಪ್ರಕಟಿಸುವುದು;

೩. ಕನ್ನಡದಲ್ಲಿ ವಿ-ಅಂಚೆ ಪತ್ರವನ್ನು ಕಳುಹಿಸುವುದು.

ಈ ಮೂರು ಅಸ್ತ್ರಗಳಿದ್ದಲ್ಲಿ ಅಂತರ್ಜಾಲದ ಬ್ರಹ್ಮಾಂಡದಲ್ಲಿ ಯಾವುದೇ ಮೂಲೆಯಿಂದ ಯಾವುದೇ ಮೂಲೆಗೆ ಲೀಲಾಜಾಲವಾಗಿ ಕನ್ನಡ ಪತ್ರಗಳನ್ನು ಪ್ರಸರಿಸಬಹುದು. ಕನ್ನಡದಲ್ಲೇ ವ್ಯವಹರಿಸಲು ಸರಕಾರಿ ಸಂಸ್ಥೆಗಳು ಮತ್ತು ಉದ್ಯಮಗಳು ಈ ತಂತ್ರಾಂಶದ ಮೂಲಕ ತಮ್ಮ ವ್ಯವಹಾರವನ್ನು ಗಣಕ

ಯಂತ್ರಕ್ಕೆ ಅಳವಡಿಸಿ, ಅಂತರ್ಜಾಲದ ಆಧುನಿಕ ಜಗತ್ತಿಗೆ ಟೆಲಿಪೋರ್ಟ್ ಮಾಡಬಹುದು. ಇದರ ಬಳಕೆ ನೀರು ಕುಡಿದಂತೆ ಸರಾಗ. ಇದನ್ನು ಉಪಯೋಗಿಸಲು ಯಾವುದೇ ರೀತಿಯ ವಿಶೇಷ ತರಬೇತಿಯ ಅಗತ್ಯವಿಲ್ಲ. ಈ ತಂತ್ರಾಂಶವನ್ನು ಮೊದಲ ಬಾರಿಗೆ ಉಪಯೋಗಿಸುವ ಮುನ್ನ, ಎಷ್ಟು ತಯಾರಿ ನಡೆಸಬೇಕೋ ಎಂದು ಚಿಂತಿಸಿದ್ದೆ. ಆದರೆ ಅದನ್ನು ಉಪಯೋಗಿಸಿದ ನಂತರ ನನ್ನ ಕಣ್ಣನ್ನೇ ನಾನು ನಂಬಲಾರದೆ ಹೋದೆ. ಈ ತಂತ್ರಾಂಶವು ಉತ್ಕೃಷ್ಟ ಮಟ್ಟದ್ದಾಗಿದ್ದು, ಯಾವುದೇ ಅಂತಾರಾಷ್ಟ್ರೀಯ ಗುಣಮಟ್ಟದ ಗಣಕಮುದ್ರಣ ತಂತ್ರಾಂಶಕ್ಕೆ ಸರಿಸಾಟಿಯಾಗಿ ನಿಲ್ಲುತ್ತದೆ. ಈ ಲೇಖನವನ್ನು ನಾನು ಬರಹವನ್ನು ಉಪಯೋಗಿಸಿಯೇ ಬರೆದದ್ದು.

ಪ್ರಸ್ತುತದಲ್ಲಿ ಬರಹ ವಾಸು ಅವರು ನ್ಯೂಯಾರ್ಕಿನಲ್ಲಿ ಗಣಕ-ಕಾರ್ಯ ಸಲಹಾ ತಂತ್ರಜ್ಞರಾಗಿ (ಕನ್ಸಲ್ಟೆಂಟ್ ಕಂಪ್ಯೂಟರ್ ಸಾಫ್ಟ್‌ವೇರ್ ಎಂಜಿನಿಯರಾಗಿ) ಕೆಲಸ ಮಾಡುತ್ತಿದ್ದಾರೆ. ಅವರ ಬರಹ ತಂತ್ರಾಂಶ ಕನ್ನಡಿಗರ ಬಳಕೆಗೆ ಮುಕ್ತವಾಗಿದೆ. ಯಾರು ಬೇಕಾದರೂ ಉಚಿತವಾಗಿ ಅಂತರ್ಜಾಲದಿಂದ ಬರಹವನ್ನು ಅವತರಣ ಮಾಡಿಕೊಳ್ಳಬಹುದು. ಬಲು ಸ್ನೇಹಪರವಾದ ಈ ತಂತ್ರಾಂಶವನ್ನು ಹೇಗೆ ಬಳಸುವುದೆಂಬುದನ್ನು ಬೇಗ ಕಲಿತು ಉಪಯೋಗಿಸಬಹುದು.

ವೈಶಿಷ್ಟ್ಯಗಳ ಬೊಕ್ಕಸವಿದು ಬರಹ – ೪

ಈ ಹಿಂದೆ ಬಿಡುಗಡೆಯಾದ 'ಬರಹ ೨೦೦೦' ನ್ನೇ, ಅನ್ನೇ ಬಹಳ ಜನ ಇನ್ನೂ ಬಳಸುತ್ತಿದ್ದಾರೆ. ಆದರೆ, ಇತ್ತೀಚೆಗೆ ಬಿಡುಗಡೆಯಾದ 'ಬರಹ-೪' ಆವೃತ್ತಿಯು ಹಿಂದಿನ ಆವೃತ್ತಿಗಳಿಗಿಂತ ಹಲವು ಹೆಚ್ಚಿನ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಜೊತೆಗೆ, ಜನಬೇಕೆಂದು ಕೇಳಿಕೊಂಡ ಇನ್ನೂ ಅವಶ್ಯಕ ರೂಪುರೇಷೆಗಳನ್ನು ಒಳಗೊಂಡಿದೆ. ಬರಹ-೪ ರಲ್ಲಿ ಕನ್ನಡ ಮತ್ತು ದೇವನಾಗರೀ ಲಿಪಿಯಲ್ಲಿ (ಮರಾಠಿ, ಹಿಂದಿ, ಸಂಸ್ಕೃತ) ಬರೆಯುವ ಸೌಲಭ್ಯವಿದೆ. ಈ ಪರಿಷ್ಕೃತ ನವೀನ ಬರಹವು ಕರ್ನಾಟಕ ಸರಕಾರ ನಿಗದಿಪಡಿಸಿರುವ ಕೀಬೋರ್ಡ್ ಮತ್ತು ಫಾಂಟ್ ಪ್ರಾಮಾಣೀಕರಣಗಳನ್ನು ಅಳವಡಿಸಿದ ಮೊಟ್ಟಮೊದಲ ತಂತ್ರಾಂಶವಾಗಿದೆ.

ಬರಹ-೪ರಲ್ಲಿ ಮೊದಲಿಗಿದ್ದ ಅಕ್ಷರ ರೂಪ (ಫಾಂಟ್)ಗಳನ್ನು ಪರಿಷ್ಕರಿಸಿದೆ. ಅಲ್ಲದೆ ಹೊಸ ಹೊಸ ಅಕ್ಷರ ರೂಪಗಳನ್ನು ಸೇರಿಸಲಾಗಿದೆ. (ಅಮೆರಿ ಕನ್ನಡ ಎಂಬ ಫಾಂಟ್ ಸಹ ಇಲ್ಲಿದೆ.) ಜೊತೆಗೆ ಈ ಬರಹ ತಂತ್ರಾಂಶವು ವಿಶ್ವಾದ್ಯಂತ ಕನ್ನಡಿಗರ ಮನೆಮಾತಾಗಿದ್ದು, ಅದರ ಬಗ್ಗೆ ಕರ್ನಾಟಕದ ಎಲ್ಲಾ ಪ್ರಸಿದ್ಧ ಪತ್ರಿಕೆಗಳು ಮುಕ್ತಕಂಠದಿಂದ ಶ್ಲಾಘಿಸಿ ಹೊಗಳಿವೆ.

ಅಂತರ್‌ಜಾಲದಲ್ಲಿ ಪ್ರಕಟವಾಗುವ ಅನೇಕ ಕನ್ನಡ ಸಾಹಿತ್ಯ ಪತ್ರಿಕೆಗಳು (ಉದಾಹರಣೆಗೆ, ಕನ್ನಡ ಸಾಹಿತ್ಯ. ಕಾಮ್, ಸೃಜನ ಇತ್ಯಾದಿ) 'ಬರಹ'ವನ್ನು ಬಳಸಿಕೊಳ್ಳುತ್ತಿವೆ. ಅನೇಕ ಕನ್ನಡ ಸಂಘಗಳು, ಕೂಟಗಳು ತಮ್ಮ ಅಂತರಜಾಲ ತಾಣಕ್ಕೆ ಬರಹವನ್ನು ಉಪಯೋಗಿಸುತ್ತಿವೆ. (ಉದಾಹರಣೆಗೆ ವಿದ್ಯಾರಣ್ಯದ ಸಂಗಮ, ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟ, ದಕ್ಷಿಣ ಕ್ಯಾಲಿಫೋರ್ನಿಯಾ ಕನ್ನಡ ಕೂಟ, ಪಂಪ ಕನ್ನಡಕೂಟ, ಮುಂತಾದವು).

ಹಲವಾರು ಕನ್ನಡ ಕೂಟಗಳು ತಮ್ಮ ವಾರ್ತಾ ಪತ್ರಗಳನ್ನು, ಕರೆಯೋಲೆ, ಹಾರೋಲೆಗಳನ್ನು, ಸಾಹಿತ್ಯ ಸಂಚಿಕೆಗಳನ್ನು ಸ್ಮರಣಸಂಚಿಕೆಗಳನ್ನು 'ಬರಹ' ಉಪಯೋಗಿಸಿಕೊಂಡೇ ಹೊರತಂದಿವೆ, ತರುತ್ತಿವೆ. ನಮ್ಮ ಕನ್ನಡ ಕೂಟದ ಇನ್ನೂರ ಹತ್ತು ಪುಟಗಳ, ಈ ೨೦೦೨ ವರ್ಷದ 'ಚಿತ್ರಭಾನು' ಸಾಹಿತ್ಯ ವಾರ್ಷಿಕ ಪತ್ರಿಕೆಯು ವಿನ್ಯಾಸ, ಜೋಡಣೆ ಅಚ್ಚುಕಟ್ಟು ಇವೆಲ್ಲದರ ಸಂಪೂರ್ಣ ಹೊಣೆ ಹೊತ್ತಿದ್ದು ಶೇಷಾದ್ರಿವಾಸು ಎಂದು ಅದರ ಪ್ರಧಾನ ಸಂಪಾದಕ ಹರಿಹರೇಶ್ವರ ಹೇಳುತ್ತಾರೆ. ಹ್ಯೂಸ್ಟನ್ ವಿಶ್ವ ಕನ್ನಡ ಸಮ್ಮೇಳನ - ೨೦೦೦ ತನ್ನ ಬೃಹತ್ ಸ್ಮರಣ ಸಂಚಿಕೆ ಮತ್ತು 'ದರ್ಶನ'ವನ್ನು ಬರಹ ಬಳಸಿಯೇ ಪ್ರಕಟಿಸಿತು. (ಮುಂಬರುವ ವಿಶ್ವ ಕನ್ನಡ ಸಮ್ಮೇಳನ ೨೦೦೨ರ ಸ್ಮರಣ ಸಂಚಿಕೆಗೆ ಲೇಖನಗಳನ್ನು 'ಬರಹ-೪' ರಲ್ಲಿಯೇ ಬರೆದು ಕಳುಹಿಸಿ ಎಂದು ಅದರ ಪ್ರಧಾನ ಸಂಪಾದಕರು ಕೇಳಿಕೊಳ್ಳುವ ಸಂಭವವಿದೆ.) ಬರಹ-೪ನ್ನು ನೀವು ಬಳಸುತ್ತಿದ್ದರೆ, ಪ್ರತಿಬಾರಿ ಅದನ್ನು ಬಳಸಲು ಪುಟ ತೆರೆದಾಗ, 'ಕನ್ನಡ - ಪುಟ' ಎಂಬ ಅಂಕಣ ಒಡಮೂಡುತ್ತದೆ. ಎಸ್.ಕೆ. ಹರಿಹರೇಶ್ವರ ಅವರು ಸಂಪಾದಕರಾಗಿರುವ, ಈ 'ಕನ್ನಡ-ಪುಟ'ದಲ್ಲಿ ಕನ್ನಡದ ಹೊಸ ಹೊಸ ಸಾಹಿತ್ಯದ ಸುದ್ದಿಗಳನ್ನು ಪ್ರಕಟಿಸುವ ಯೋಜನೆಯನ್ನು ವಾಸು ಹಾಕಿಕೊಂಡಿದ್ದಾರೆ.

ಬರಹ ಮುಂದೇನು?

ಬರಹದ ಸಂಶೋಧನೆ ಮತ್ತು ಅಭಿವೃದ್ಧಿ ನಾಗಾಲೋಟದಿಂದ ಓಡುತ್ತಿದೆ, ವಾಸು ಹೇಳುತ್ತಾರೆ: ಬರಹದ ಮುಂದಿನ ಆವೃತ್ತಿಯಲ್ಲಿ ಕನ್ನಡ ಅಕ್ಷರಾನುಕ್ರಮದಲ್ಲಿ ವಿಂಗಡಣೆ (ಸಾರ್ಟಿಂಗ್), ಯೂನಿಕೋಡ್ ಅಳವಡಿಸಲಾಗುತ್ತದೆ ಮತ್ತು ವಿವಿಧ ಡೇಟಾ ಫಾರಮ್ಯಾಟ್‌ಗಳಾದ (ಬರಹ, ಕ.ಗ.ಪ, (ಅನ್ಸಿ, ಯೂನಿಕೋಡ್)ಗಳ ನಡುವೆ ಪರಸ್ಪರ ಪರಿವರ್ತನೆ (ಕನ್‌ವರ್ಟ್) ಮಾಡಬಹುದಾಗಿರುತ್ತೆ. ಈ ಎಲ್ಲಾ ಅಂಶಗಳನ್ನು 'ಬರಹ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಕಿಟ್ (ಎಸ್.ಡಿ.ಕೆ.)' ಎಂದು ಕೊಡಲಾಗುವುದು. ಕನ್ನಡ ತಂತ್ರಾಂಶ ತಯಾರಕರು ಈ ಸಂಪುಟ (ಕಿಟ್)ವನ್ನು ಬಳಸಿಕೊಂಡು ಕನ್ನಡದಲ್ಲಿ ಡೇಟಾ

ಬೇಸ್ ಅಪ್ಲಿಕೇಶನ್ ಸಾಫ್ಟ್‌ವೇರ್‌ಗಳನ್ನು ಬಹಳ ಸುಲಭವಾಗಿ ತಯಾರಿಸಬಹುದು. ಕನ್ನಡ ತಂತ್ರಾಂಶ ತಯಾರಕರಿಗೆ ಇದೊಂದು ವರದಾನವಾಗಲಿದೆ.

ತಮ್ಮ ಅಪಾರ ಶ್ರಮದ ಫಲವಾದ ಈ 'ಬರಹ' ತಂತ್ರಾಂಶದಿಂದ ಕಿಂಚಿತ್ತೂ ಆದಾಯವನ್ನು ವಾಸುರವರು ಬಯಸರು. ಆದರೆ ಈ ತಂತ್ರಾಂಶವನ್ನು ಬಳಸುವ ಕನ್ನಡಿಗರು ಯಾರಾದರೂ ಸಂಭಾವನೆಯನ್ನು ಕೊಡುವುದಾಗಿದ್ದರೆ, ಅದನ್ನು ಕನ್ನಡದ ಶ್ರೇಷ್ಠ ಲೇಖಕ ಅ.ನ.ಕೃ. ಅವರಿಗೆ ಗೌರವ ಪೂರ್ವಕವಾಗಿ ಸ್ಥಾಪಿಸಿರುವ ಪ್ರತಿಷ್ಠಾನಕ್ಕೆ ಉದಾರ ಕೊಡುಗೆಯಾಗಿ ಅದನ್ನು ಸ್ವೀಕರಿಸುವುದಾಗಿ ಪ್ರಕಟಿಸಿ. ವಿನಂತಿಸಿಕೊಂಡಿದ್ದಾರೆ. ಅವರ ಈ ಉದ್ದೇಶ ನಿಜಕ್ಕೂ ಶ್ಲಾಘನೀಯವಾದದ್ದು. ವಾಸುರಂತಹ ಕನ್ನಡಾಭಿಮಾನಿಗಳು ಬಹಳ ವಿರಳ. ಅವರು ತಮ್ಮ ಸಾಧನೆಯ ಮೂಲಕ ಗಣಕ ಯಂತ್ರದ ಈ ನವಯುಗದಲ್ಲಿ ಕನ್ನಡದ ಕ್ರಾಂತಿಯ ಕಹಳೆಯೂದಿದ್ದಾರೆ. ಅವರು ಕನ್ನಡದ ಪುನರುತ್ಥಾನಕ್ಕೆ ನಾಂದಿ ಹಾಡಿದ್ದಾರೆ. ಇಂತಹ ಅಸಾಧಾರಣ ವ್ಯಕ್ತಿ ನಮ್ಮೊಂದಿಗಿದ್ದಾರೆ ಎಂಬುದೇ ನಮಗೆ ಹೆಮ್ಮೆಯ ವಿಚಾರ.

ಬರಹದ ಬಗ್ಗೆ ಹೆಚ್ಚಿನ ವಿವರಗಳು ಬೇಕೇ? ಬರಹವನ್ನು ನಿಮ್ಮ ಕಂಪ್ಯೂಟರ್‌ಗೆ ಅವತರಿಸಿಕೊಳ್ಳಬೇಕೆ? ತಡಮಾಡಬೇಡಿ. www.baraha.comಗೆ ಭೇಟಿಕೊಡಿ.

– ಶೇಷಾದ್ರಿ ವಾಸು

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಶಿಕ್ಷಣ ಕ್ಷೇತ್ರದ ವಿರಿಳಿತಗಳು

ಡಾ|| ಜಯಪ್ರಕಾಶ್ ಮಾವಿನಕುಳಿ

ಭಾರತದ ಚರಿತ್ರೆಯಲ್ಲಿ ೧೮೫೭ ಬಹಳ ಮುಖ್ಯ ವರುಷ. ಏಕೆಂದರೆ ಅದೇ ವರುಷ ಭಾರತದ ಸ್ವಾತಂತ್ರ್ಯ ಸಂಗ್ರಾಮ (ಸಿಪಾಯಿದಂಗೆ) ನಡೆಯಿತು ಮತ್ತು ಅದೇ ವರುಷ ಮೂರು ವಿಶ್ವವಿದ್ಯಾನಿಲಯಗಳು ಕಲ್ಕತ್ತ, ಮುಂಬಯಿ ಮತ್ತು ಮದ್ರಾಸ್ ಸ್ಥಾಪನೆಗೊಂಡವು. ೧೮೮೨ ರಲ್ಲಿ ಲಾಹೋರ್, ೧೮೮೭ ರಲ್ಲಿ ಅಲಹಾಬಾದ್ ಪ್ರಾರಂಭಗೊಂಡರೂ ಇವೆಲ್ಲವೂ ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಕೇವಲ ಸಂಯೋಜನೆ ನೀಡುವುದಕ್ಕೆ ಮಾತ್ರ ಸೀಮಿತವಾಗಿದ್ದವು. ೧೯೦೨ ರಲ್ಲಿ ಲಾರ್ಡ್ ಕರ್ಜನ್ ಆದೇಶದಂತೆ ವಿಶ್ವವಿದ್ಯಾನಿಲಯ ಆಯೋಗ ನೇಮಕಗೊಂಡು ಅದರ ಸಲಹೆಯಂತೆ ಮತ್ತು ಬಂಗಾಲದ ಸರ್ ಅಶುತೋಷ್ ಮುಖರ್ಜಿಯವರ ಸ್ವಂತ ಪ್ರಯತ್ನದಿಂದ ವಿಶ್ವವಿದ್ಯಾನಿಲಯ ಕೇಂದ್ರಗಳಲ್ಲಿ ಪಾಠಪ್ರವಚನ, ಸಂಶೋಧನೆ, ಆರಂಭಗೊಂಡಿತು. ಅಲ್ಲಿಯವರೆಗೆ ಕಾಲೇಜುಗಳಲ್ಲೇ ಸ್ನಾತಕೋತ್ತರ ಶಿಕ್ಷಣ ನಡೆಯುತ್ತಿದ್ದವು.

ಕರ್ನಾಟಕದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಘನ ಸಹಾಯದಿಂದ ೧೯೧೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿತು. ಅದೊಂದು ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದ ವರುಷ. ನಂತರ ಕರ್ನಾಟಕ ವಿಶ್ವವಿದ್ಯಾನಿಲಯ (೧೯೫೦), ಬೆಂಗಳೂರು (೧೯೬೪) ಮಂಗಳೂರು, ಗುಲ್ಬರ್ಗಾ (೧೯೮೦) ಕುವೆಂಪು ವಿಶ್ವವಿದ್ಯಾನಿಲಯ (೧೯೮೭) ರಲ್ಲಿ ಸ್ಥಾಪನೆಗೊಂಡವು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ವರುಷದಲ್ಲಿ ಕರ್ನಾಟಕದಲ್ಲಿ ೮ ಪದವಿ ಕಾಲೇಜುಗಳು, ೧೪ ಇಂಟರ್ ಕಾಲೇಜುಗಳು ಮತ್ತು ೬ ಪ್ರೊಫೆಶನಲ್ ಕಾಲೇಜುಗಳು ಇದ್ದರೆ ಕರ್ನಾಟಕ ಏಕೀಕರಣವಾದಾಗ ೧೯೫೬ ರಲ್ಲಿ – ೧೫ ಪದವಿ ಕಾಲೇಜುಗಳು ೧೪ ಇಂಟರ್ ಕಾಲೇಜುಗಳು ಮತ್ತು ೧೪ ಪ್ರೊಫೆಶನಲ್ ಕಾಲೇಜುಗಳು ಇದ್ದವು. ೧೯೯೦–೯೧ ಸಮೀಕ್ಷೆಯ ಪ್ರಕಾರ ಆರು ವಿಶ್ವವಿದ್ಯಾನಿಲಯಗಳಲ್ಲಿ ೧೫೯ ಸರ್ಕಾರಿ ಮತ್ತು ೬೭೫ ಖಾಸಗಿ ಕಾಲೇಜುಗಳಿವೆ. ಈಗಿನ ಸಮೀಕ್ಷೆಯ ಪ್ರಕಾರ ಅವು ಇನ್ನೂ ತುಸು ಜಾಸ್ತಿಯಾಗಿವೆ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಮ್ಮ ದೇಶದಲ್ಲಿ ೧೮ ವಿಶ್ವವಿದ್ಯಾನಿಲಯ ಮತ್ತು ಸುಮಾರು ೬೦೦ ಕಾಲೇಜುಗಳಲ್ಲಿ ಎರಡು ಲಕ್ಷ ವಿದ್ಯಾರ್ಥಿಗಳು ಇದ್ದರು. ಈಗಿನ ಮಾಹಿತಿ ಪ್ರಕಾರ ೨೦೦ ವಿಶ್ವವಿದ್ಯಾನಿಲಯಗಳು, ಹನ್ನೆರಡು ಸಾವಿರ ಕಾಲೇಜುಗಳಲ್ಲಿ ೭೨ ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಭಾರತದ ಜನಸಂಖ್ಯೆ ೧೯೪೭ ರಲ್ಲಿ ೩೩ ಕೋಟಿ ಇದ್ದುದು ಈಗ ೧೦೨ ಕೋಟಿಗಳಾಗಿವೆ.

ನಮ್ಮ ದೇಶದಲ್ಲಿ ಕಾಲೇಜು ಶಿಕ್ಷಣ ಎಲ್ಲರಿಗೂ ಸಿಗಬೇಕೆಂದು ನಿರ್ಧರಿಸಿದ

ಫಲದಿಂದಾಗಿ ಎಲ್ಲ ಊರುಗಳಲ್ಲಿ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜುಗಳು ಅಸ್ತಿತ್ವಕ್ಕೆ ಬಂದವು. ಅಗಾಧವಾಗಿ ಕಾಲೇಜು ಶಿಕ್ಷಣ ಬೆಳೆಯಿತು. ಮೊದಲು ಇಂಟರ್ ಎಂದು ಒಂದು ವರ್ಷ ಇದ್ದು ಅದು ವಿಶ್ವವಿದ್ಯಾನಿಲಯದಡಿಯಲ್ಲೇ ಇತ್ತು. ನಂತರ ಪದವಿಪೂರ್ವ ಶಿಕ್ಷಣ ಒಂದು ವರುಷ ಅಂತ ಬಂತು. ಅದೂ ವಿಶ್ವವಿದ್ಯಾನಿಲಯದ ಹತೋಟಿಯಲ್ಲಿತ್ತು. ನಂತರ ಪದವಿಪೂರ್ವ ಶಿಕ್ಷಣ ಎರಡು ವರ್ಷಕ್ಕೆ ಬಂತು. ಆಗ ಪದವಿಪೂರ್ವ ಶಿಕ್ಷಣ ಮಂಡಳಿ ಎಲ್ಲಾ ಪದವಿಪೂರ್ವ ಕಾಲೇಜುಗಳ ಪಠ್ಯ ಮತ್ತು ಪರೀಕ್ಷೆಗಳನ್ನು ಮಾಡಲು ಹುಟ್ಟಿಕೊಂಡಿತು. ಆದರೆ ಪ್ರಥಮ ದರ್ಜೆ ಕಾಲೇಜುಗಳಲ್ಲೇ ಪದವಿಪೂರ್ವ ಶಿಕ್ಷಣ ಮುಂದುವರೆಯುತ್ತಿತ್ತು.

೧೯೭೩-೭೪ ರಲ್ಲಿ ಕರ್ನಾಟಕದಲ್ಲಿ ಪ್ರಥಮ ದರ್ಜೆ ಕಾಲೇಜುಗಳ ಜೊತೆಗೆ ಪದವಿಪೂರ್ವ ಶಿಕ್ಷಣವನ್ನು ಬೋಧಿಸಲು ಕಿರಿಯ ಕಾಲೇಜು ಅಥವಾ ಪದವಿಪೂರ್ವ ಕಾಲೇಜುಗಳು ಅಸ್ತಿತ್ವಕ್ಕೆ ಬಂದವು. ಆಗ ಮೂರು ರೀತಿಯ ವ್ಯವಸ್ಥೆಗಳು ಜಾರಿಗೆ ಬಂದವು. ಪದವಿಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಏಕಕಾಲದಲ್ಲಿ-

1. ಸ್ವತಂತ್ರ ಪದವಿಪೂರ್ವ ಕಾಲೇಜುಗಳು
2. ಪ್ರೌಢಶಾಲೆಗೆ ಸೇರಿಸಿಕೊಂಡು ಇರುವ ಕಾಂಪೋಸಿಟ್ ಕಾಲೇಜುಗಳು
3. ಪ್ರಥಮ ದರ್ಜೆ ಅಥವಾ ಪದವಿ ಕಾಲೇಜುಗಳಲ್ಲಿರುವ ಪದವಿಪೂರ್ವ ಶಿಕ್ಷಣ ವ್ಯವಸ್ಥೆ.

ಕಾಲೇಜುಗಳ ಅಧ್ಯಾಪಕರಿಗೆ ೧೯೭೬ ರಲ್ಲಿ ಯುಜಿಸಿ (ವಿಶ್ವವಿದ್ಯಾಲಯ ಧನಸಹಾಯ ಆಯೋಗ) ಹೇಳಿದ ಸಂಬಳ ಬಂತು. ನಂತರ ೧೯೯೬ ರಲ್ಲಿಯೂ ಯು.ಜಿ.ಸಿ. ವೇತನ ಶ್ರೇಣಿ ಜಾರಿಗೆ ಬಂತು. ಆದರೆ ಈಗ ಹೊಸ ಪರತ್ತು ಮೂಡಿ ಬಂತು. ಕಾಲೇಜುಗಳಲ್ಲಿರುವ ಪದವಿಪೂರ್ವ ಶಿಕ್ಷಣವನ್ನು ಬೇರ್ಪಡಿಸಬೇಕು. 'ಯುಜಿಸಿ ಸಂಬಳ ತೆಗೆದುಕೊಳ್ಳುವವರು ಪದವಿಪೂರ್ವ ಶಿಕ್ಷಣವನ್ನು ಬೋಧಿಸಬಾರದು' ಎಂಬ ರಾಷ್ಟ್ರೀಯ ನಿಲುವನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿತು. ಇದರ ಪರಿಣಾಮ ಮೂರು ರೀತಿಯ ಪದವಿಪೂರ್ವ ಶಿಕ್ಷಣದ ಬದಲು ಎರಡು ರೀತಿಯ-ಕಾಂಪೋಸಿಟ್ ಮತ್ತು ಸ್ವತಂತ್ರ ಪದವಿಪೂರ್ವ ಕಾಲೇಜುಗಳು ಮಾತ್ರ ಈಗ ಅಸ್ತಿತ್ವದಲ್ಲಿದ್ದು ಪದವಿ ಶಿಕ್ಷಣ ಮಂಡಳಿಯ ಆಧೀನದಲ್ಲಿ ಕೆಲಸ ಮಾಡುತ್ತಿವೆ.

ಇದಕ್ಕೆ ಮತ್ತೊಂದು ಮುಖವಿದೆ. ಕಾಲೇಜುಗಳಿಂದ ಪದವಿಪೂರ್ವ ಕಾಲೇಜನ್ನು ಬೇರ್ಪಡಿಸಿದಾಗ ಈಗಾಗಲೇ ಅಲ್ಲಿ ಸುಸಜ್ಜಿತವಾಗಿದ್ದ ಗ್ರಂಥ ಭಂಡಾರ, ಪ್ರಯೋಗಶಾಲೆ ಮತ್ತು ಅನುಭವೀ ಅಧ್ಯಾಪಕರುಗಳನ್ನು ಪದವಿಪೂರ್ವ ಶಿಕ್ಷಣ ಕಳೆದುಕೊಂಡಿತು. ಪುನಃ ಇವೆಲ್ಲವೂ ಕಾಲಕ್ರಮೇಣ ಸರಿಯಾಗು

ತ್ತದೆ. ಆದರೆ ಅಲ್ಲಿಯವರೆಗೆ ಇರುವ ಸಂಕ್ರಮಣ ಸ್ಥಿತಿಯನ್ನು ದಾಟಬೇಕಾದ ವಿದ್ಯಾರ್ಥಿಗಳು ತುಂಬಾ ಸಂಕಷ್ಟದ ದಿನಗಳನ್ನು ಅನುಭವಿಸಬೇಕಾಗುತ್ತದೆ. ಈ ನಷ್ಟಕ್ಕೆ ನಷ್ಟವೇ ಕೊನೆಯೋ........

ಇನ್ನು ಕಾಲೇಜುಗಳ ಕಥೆ ಹೇಳಿ ಪ್ರಯೋಜನವಿಲ್ಲ. ಏಕೀಕರಣಕ್ಕೆ ಮುಂಚೆ ಕಾಲೇಜು ಸ್ಥಾಪಿಸುವುದು ಅತ್ಯಂತ ಕಷ್ಟದ ಕೆಲಸವಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ (ಅವಿಭಜಿತ) ಉಡುಪಿಯಲ್ಲಿ ಎಂ.ಜಿ.ಎಂ. ಕಾಲೇಜು ಸ್ಥಾಪಿಸುವಾಗ ಮದ್ರಾಸ್ ಪ್ರೆಸಿಡೆನ್ಸಿಯವರು ಕೇಳಿದರಂತೆ "ನೀವು ಸ್ಥಾಪಿಸ ಹೊರಟಿರುವುದು ಶಾಲೆಯೋ, ಕಾಲೇಜೋ? ಇದನ್ನು ಕೇಳಿ ಸಮಜಾಯಿಸಿ ಮಾಡಲು ಆಗ ಡಾ. ಟಿ.ಎಂ.ಎ. ಪೈ ಅವರಿಗ ಸಾಕು ಸಾಕಾಯ್ತಂತೆ!

ಬಹಳ ವರುಷಗಳವರೆಗೂ ಕರ್ನಾಟಕದಲ್ಲಿ ಮೂರು ವಿಶ್ವವಿದ್ಯಾನಿಲಯ ಗಳಿದ್ದವು. ಕೆಲವೇ ಕಾಲೇಜುಗಳಿದ್ದವು. ಖಾಸಗಿ ಕಾಲೇಜನ್ನು ಸ್ಥಾಪಿಸುವುದು ಅತ್ಯಂತ ಕಷ್ಟದ ಕೆಲಸವಾಗಿತ್ತು ಕಾಲೇಜು ಸ್ಥಾಪಿಸಲು ವಿಶ್ವವಿದ್ಯಾನಿಲಯ ದಲ್ಲಿ ತುಂಬಾ ಹಣ ಡಿಪಾಸಿಟ್ ಇಡಬೇಕಾಗಿತ್ತು. ಸ್ಥಳ, ಆಟದ ಮೈದಾನ. ಕಟ್ಟಡ, ಪ್ರಯೋಗಶಾಲೆ, ಅಧ್ಯಾಪಕರು - ಎಲ್ಲಿಂದ ತರುವುದು? ಆಗ ಸರ್ಕಾರ ಮುಂದೆ ಬಂತು. ನಾವು ನಿಮಗೆ ಅನುದಾನ ಕೊಡುತ್ತೇವೆ. ಸರ್ಕಾರಿ ಸ್ಥಳ ಗಳನ್ನು ರಿಯಾಯ್ತಿನಲ್ಲಿ ನೀಡುತ್ತೇವೆ ಖಾಸಗಿಯವರು ಮುಂದೆ ಬಂದು ಶಾಲಾ ಕಾಲೇಜುಗಳನ್ನು ಸ್ಥಾಪಿಸಿರಿ ಎಂದಾಗ ಖಾಸಗಿಯರಿಗೆ ಉತ್ಸಾಹ ಬಂತು. ಶಿಕ್ಷಕರಿಗೆ ಸರ್ಕಾರ ಶೇಕಡಾ ೮೦ ಮತ್ತು ಖಾಸಗಿಯವರು ಶೇಕಡಾ ೨೦ ನೀಡುವ ವ್ಯವಸ್ಥೆ ಜಾರಿಗೆ ಬಂತು.

ಎಲ್ಲ ಕಡೆಯೂ, ಎಲ್ಲ ಕಾಲದಲ್ಲೂ ಒಳ್ಳೆಯವರು ಇರುವುದಿಲ್ಲ. ಖಾಸಗಿ ಕಾಲೇಜುಗಳೇನೋ ಎಲ್ಲ ಕಡೆ ಬಂದವು. ಆದರೆ ಶಿಕ್ಷಕರ ಸಂಬಳವೆಂದು ಸರ್ಕಾರ ಕೊಡಮಾಡಿದ ಶೇಕಡಾ ಎಂಬತ್ತರಲ್ಲೇ ಮೋಸ ಶುರುವಾಯಿತು. ಖಾಸಗಿ ಆಡಳಿತ ಮಂಡಳಿಯವರು ತಾವೇ ಸಂಪನ್ಮೂಲಗಳನ್ನು ಸಂಗ್ರಹಿಸಿ ಉಳಿದ ಶೇಕಡಾ ಇಪ್ಪತ್ತರಷ್ಟು ಸಂಬಳವನ್ನು ಶಿಕ್ಷಕರಿಗೆ ನೀಡುವುದರ ಬದಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರ ಕೊಡುವ ಅನುದಾನದಲ್ಲೇ ವಂಚಿಸಲು ಶುರು ಮಾಡಿದವು. ದುಷ್ಟ ಕೆಲವು ಖಾಸಗಿ ಆಡಳಿತ ಮಂಡಳಿಯವರು ಮಾಡು ತ್ತಿರುವ ಶೋಷಣೆಯ ವಿರುದ್ಧ ಕರ್ನಾಟಕದಾದ್ಯಂತ ಕಾಲೇಜು ಶಿಕ್ಷಕರು ೧೯೭೫ ರಲ್ಲಿ ಸುದೀರ್ಘ ಹೋರಾಟ ಮಾಡಿದ ಪರಿಣಾಮ ೧೯೭೭ ರಿಂದ ಅನುದಾನಿತ ಕಾಲೇಜು ಶಿಕ್ಷಕರಿಗೆ ನೂರಕ್ಕೆ ನೂರರಷ್ಟು ಸಂಬಳವನ್ನು ಸರ್ಕಾರವೇ ನೇರವಾಗಿ ಪಾವತಿಸಲು ಒಪ್ಪಿಕೊಂಡಿತು. ಜೊತೆಗೆ ಮೀಸಲಾತಿ ಇನ್ನಿತರ ಅನೇಕ ಕಾನೂನುಗಳು ಜಾರಿಗೆ ಬಂದವು. ಶೇಕಡಾ ಎಂಬತ್ತರಷ್ಟು ಅನುದಾನ ಸರ್ಕಾರ

ಕೊಡುವಾಗಲೂ ಉತ್ತಮ ರೀತಿಯಿಂದ ಆಡಳಿತ ನಡೆಸಿದ ಅನೇಕ ಕಾಲೇಜುಗಳಿವೆ. "ನೀವು ಬೇಡಿ, ಸಾಲ ಮಾಡಿ, ಏನೂ ಮಾಡಿ ಆದರೆ ಪ್ರತೀ ತಿಂಗಳ ಒಂದನೇ ತಾರೀಖು ಶಿಕ್ಷಕರಿಗೆ ಸಂಬಳ ನೀಡಿ" ಎಂಬುದು ಆರು ಕಾಲೇಜುಗಳನ್ನು ನಡೆಸುತ್ತಿದ್ದ ಡಾ. ಟಿ.ಎಂ.ಎ. ಪೈ ಅವರ ಆದೇಶವಾಗಿತ್ತು. ಸರ್ಕಾರವೇ ಸಂಪೂರ್ಣವಾಗಿ ಕಾಲೇಜು ಶಿಕ್ಷಕರ ಸಂಬಳವನ್ನು ನೀಡುತ್ತದೆ ಎಂದ ಕೂಡಲೇ ಅನೇಕ ಖಾಸಗಿಯವರು ಮುಂದೆ ಬಂದರು. ಇದರ ಪರಿಣಾಮ ಅಗತ್ಯವಾದ ಕಡೆ ಕಾಲೇಜುಗಳು ಪ್ರತಿಷ್ಠೆಯ ಸಂಕೇತಗಳಾಗಿ ಸ್ಥಾಪಿಸಲ್ಪಟ್ಟವು. ಸರ್ಕಾರಕ್ಕೆ ಬಿಸಿ ಮುಟ್ಟತೊಡಗಿತು, ಖಾಸಗಿ ಕಾಲೇಜು ಶಿಕ್ಷಕರಿಗೆ ತಕ್ಷಣ ಸಂಬಳವನ್ನು ನೀಡಲಾಗುವುದಿಲ್ಲ ಕಾಲೇಜು ಸ್ಥಾಪನೆಗೊಂಡು ಐದು ವರುಷ ಆಗಿರಬೇಕು ಎಂದಿತು. ನಂತರ ಏಳು ವರುಷಗಳಾಗಿ ಎಂದಿತು. ಈಗ ಕೆಲವು ವರುಷಗಳಿಂದ ಶಾಶ್ವತ ಅನುದಾನ ರಹಿತವೆಂದೇ ಷರತ್ತನ್ನು ಹಾಕಿಯೇ ಕಾಲೇಜುಗಳಿಗೆ ಪರವಾನಿಗೆ ನೀಡುತ್ತಿದೆ. ಇದರರ್ಥ ಶಕ್ತಿ ಇದ್ದರೆ ಕಾಲೇಜು ಆರಂಭಿಸಿ ಇಲ್ಲವೇ ಸುಮ್ಮನೇ ಕುಳಿತುಕೊಳ್ಳಿ ಎಂಬುದು.

ಇಷ್ಟು ಸಾಲದು. ಮುಂದೆಬರುವ ಖಾಸಗಿ ಕಾಲೇಜುಗಳ ಹೊಣೆಯನ್ನು ಹೊರಲು ಸರ್ಕಾರ ನಿರಾಕರಿಸಿದ್ದಾಯಿತು. ಆದರೆ ಈಗಾಗಲೇ ಅನುದಾನ ನೀಡುತ್ತೇವೆ ಎಂದು ಆಡಳಿತ ಮಂಡಳಿಯೊಂದಿಗೆ ಒಪ್ಪಂದ ಮಾಡಿಕೊಂಡದ್ದನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಖಾಸಗಿ ಕಾಲೇಜು ಶಿಕ್ಷಕರನ್ನು ನೇಮಿಸಿಕೊಳ್ಳಲು ಅನುಮತಿ ನಿರಾಕರಿಸಲಾಗಿದ. ಅಂದರೆ ಈಗ ಇದ್ದವರನ್ನು ಮಾತ್ರ ಪರಿಗಣಿಸಿ ಸರ್ಕಾರ ಸಂಬಳವನ್ನು ನೀಡುತ್ತದೆ. ಇನ್ನು ಮುಂದೆ ನೇಮಕಾತಿ ಇಲ್ಲ. ಇದು ೧೯೮೬ ರಿಂದ ಅಂದರೆ ಹದಿನೇಳು ವರುಷಗಳಿಂದ ಸರ್ಕಾರ ಶಿಕ್ಷಕರ ನೇಮಕಾತಿಗೆ ಅನುಮತಿ ನೀಡದೇ "ಕಾಲೇಜು ಶಿಕ್ಷಣ ತನ್ನ ಆದ್ಯತೆಯಲ್ಲ ಎಂದು ಪರೋಕ್ಷವಾಗಿ ಹೇಳಿದೆ. ಇದರ ಪರಿಣಾಮ ಏನಾಯಿತು? ಆಡಳಿತ ಮಂಡಳಿಯವರೇ ಶಿಕ್ಷಕರನ್ನು ನೇಮಿಸಿಕೊಳ್ಳಲು ಅನಿವಾರ್ಯವಾಗಿ ಶುರು ಮಾಡಬೇಕಾಯಿತು. ತಮ್ಮಲ್ಲಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಎಷ್ಟು ಸಂಬಳ ಕೊಡಲು ಸಾಧ್ಯ. ೧೯೮೬ ರಲ್ಲಿ ಯು.ಜಿ.ಸಿ. ಸಂಬಳ ನೀಡಬೇಕು ಎಂಬ ಆದೇಶ ಬಂದಾಗ ಖಾಸಗಿ ಕಾಲೇಜುಗಳು ತಮ್ಮ ಹಣದಿಂದ ಶಿಕ್ಷಕರಿಗೆ ಸಂಬಳ ಕೊಡಲು ಸಾಧ್ಯವೇ? ಇದೂ ಸಾಲದೆಂಬಂತೆ ಇಲ್ಲಾ ೧೯೯೬ ರಲ್ಲಿ ಪುನಃ ಯುಜಿಸಿಯ ಪರಿಷ್ಕೃತ ಸಂಬಳ ಜಾರಿಗೆ ಬಂದಾಗ ಸರ್ಕಾರವೇ ಸಲ್ಲದ ಅನೇಕ ಕಾನೂನುಗಳನ್ನು ತಂದು ಕೆಲವು ಅಧ್ಯಾಪಕರಿಗೆ ರಾಜ್ಯ ಸರ್ಕಾರದ ಶ್ರೇಣಿಯನ್ನು ಕೊಟ್ಟರೆ ವಿನಾ ಯುಜಿಸಿಯ ಸಂಬಳವನ್ನಲ್ಲ.

ಖಾಸಗಿ ಕಾಲೇಜುಗಳಲ್ಲಿ ಆಡಳಿತ ಮಂಡಳಿಯವರೇ ನೇಮಿಸಿಕೊಂಡ ಪೂರ್ಣಕಾಲಿಕ ಶಿಕ್ಷಕರು ನ್ಯಾಯಾಲಯದ ಮೊರೆ ಹೊಕ್ಕರು. ನ್ಯಾಯಾಲಯವೂ ಕೆಲವು

ನಿಯಮಗಳನ್ನು ಹೇಳಿ ಕರ್ನಾಟಕ ಸರಕಾರಕ್ಕೆ "ಛಿ"ಮಾರಿ ಹಾಕಿ ಇಂಥ ಶೋಷಣೆಯನ್ನು ನಿಲ್ಲಿಸಬೇಕೆಂದೂ ಮತ್ತು ಈಗ ನೇಮಿಸಿಕೊಂಡವರನ್ನು ಖಾಯಂಗೊಳಿಸಿ ಸರಕಾರ ಸಂಬಳ ನೀಡಬೇಕೆಂದೂ ಆದೇಶಿಸಿತು. ಸರಕಾರ ಇಂಥವರನ್ನು ಖಾಯಂಗೊಳಿಸಿತು, ಆದರೆ ಮರುಕ್ಷಣದಲ್ಲಿ ಮತ್ತೊಂದು ಆದೇಶ ಹೊರಡಿಸಿತು. "ಪೂರ್ಣಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳಬಾರದು ಬೇಕಾದರೆ ಅಂಶ ಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳಬಹುದೆಂದು", ಪಾಠ ಮಾಡಬೇಕಾದ ತರಗತಿಗಳಿಗೆ ಪೂರ್ಣಕಾಲಿಕ ಅಧ್ಯಾಪಕರನ್ನು ನೇಮಿಸಬಾರದು, ಬೇಕಾದರೆ ಎರಡು ಅಂಶ ಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳಬಹುದು. ಹೀಗಾಗಿ ಯಾರೂ ನ್ಯಾಯಾಲಯಕ್ಕೆ ಹೋಗುವಂತಿಲ್ಲ ಎಂದು ಸರ್ಕಾರ ತಿಳಿಸಿತು. ಆದರೆ ಅಂಶ ಕಾಲಿಕ ಶಿಕ್ಷಕರಾಗಿ ಸರ್ಕಾರಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದವರೂ ಸಹ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ಖಾಯಂ ಮಾಡುವ ಆದೇಶವನ್ನು ತಂದಿದ್ದಾರೆ. ಹೀಗೆ ರಂಗವಲ್ಲಿಯ ಕೆಳಗಡೆ ಒಬ್ಬರು. ಚಾಪೆಯ ಕೆಳಗಡೆ ಇನ್ನೊಬ್ಬರು ನುಸುಳುತ್ತಿದ್ದಾರೆ, ಹೇಗಿದೆ ಕಾಲೇಜುಗಳು?

ಇದರ ಒಟ್ಟಾರೆ ಪರಿಣಾಮ ಏನಾಯ್ತು ಎಂದರೆ ಈಗ ಅನುದಾನಿತ ಖಾಸಗಿ ಕಾಲೇಜುಗಳಲ್ಲಿ ಚಾತುರ್ವರ್ಣ ವ್ಯವಸ್ಥೆ ಇದೆ. ನಾಲ್ಕು ಬಗೆಯ ಶಿಕ್ಷಕರು ಇದ್ದಾರೆ. ಅವರಿಗೆ ಸಮಾನ ಅರ್ಹತೆ. ಸಮಾನ ಕೆಲಸ ಇದ್ದರೂ-ಒಂದೇ ತರಗತಿಗೆ ನಾಲ್ಕು ಶಿಕ್ಷಕರು ಪಾಠ ಮಾಡುತ್ತಿದ್ದರೂ ಆ ಶಿಕ್ಷಕರಿಗೆ ಮಾತ್ರ ಸಮಾನ ಸಂಬಳ ಇಲ್ಲ, ಇದನ್ನೇ ನಾನು ಚಾತುರ್ವರ್ಣ ವ್ಯವಸ್ಥೆ ಅಂದಿದ್ದು. ಈ ನಾಲ್ಕು ವರ್ಣಗಳೆಂದರೆ ಯು.ಜಿ.ಸಿ. ವೇತನ ಶ್ರೇಣಿ ಸಂಬಳ ಪಡೆಯುತ್ತಿರುವವರು (ಬ್ರಹ್ಮ) ಹನ್ನೆರಡು ಸಾವಿರ; ಕರ್ನಾಟಕ ಸರ್ಕಾರದ ವೇತನ ಶ್ರೇಣಿ ಸಂಬಳ ಪಡೆಯುತ್ತಿರುವವರು (ಕ್ಷತ್ರ) ಒಂಬತ್ತು ಸಾವಿರ, ಆಡಳಿತ ಮಂಡಳಿಯವರಿಂದ ಸಂಬಳ ಪಡೆಯುತ್ತಿರುವ ಪೂರ್ಣಾವಧಿ ಶಿಕ್ಷಕರು (ವೈಶ್ಯ). ಸಂಬಳ ಒಂದು ಸಾವಿರದಿಂದ ಆರು ಸಾವಿರ ರೂಪಾಯಿಗಳು ಮತ್ತು ಆಡಳಿತ ಮಂಡಳಿಯವರು ನೀಡಿದ ಸಂಬಳ ಪಡೆಯುತ್ತಿರುವ ಅಂಶ ಕಾಲಿಕ ಶಿಕ್ಷಕರು ವಾರಕ್ಕೆ ಒಂದು ಘಂಟೆಗೆ ರೂ. ೫೦ ರಿಂದ ರೂ. ೩೭೫ ರವರೆಗೆ (ಶೂದ್ರ) ಖಾಸಗಿ ಅನುದಾನಿತ ಕಾಲೇಜು ಶಿಕ್ಷಕರ ಅವಸ್ಥೆ ಇದು ಹೀಗೆ ನೇಮಕಾತಿಗಳಲ್ಲದೇ ಕಾಲೇಜುಗಳಿಗೆ ಅನುದಾನರಹಿತ ಪರವಾನಗಿ ನೀಡಿ ಬೇಕಾಬಿಟ್ಟಿ ಕಾಲೇಜುಗಳನ್ನು ನೀಡುವುದರಿಂದ ಇಡೀ ಕಾಲೇಜು ಶಿಕ್ಷಣಕ್ಕೆ ದೇವರೇ ಗತಿ.

ಇದು ಸಾಲದು ಎಂಬಂತೆ ತಾಂತ್ರಿಕ ಯುಗ ಸವಾಲಾಗಿ ಬಂದು ನಿಂತು ಬಿಟ್ಟಿತು. ಕಂಪ್ಯೂಟರ್ ಕಲಿಯದವನು "ಶತಮಾನದ ಮೂರ್ಖ" ಎಂಬಂತೆ ಕಂಪ್ಯೂಟರ್ ಜ್ಞಾನ ಪ್ರಸಾರದ ಬಗ್ಗೆ ಸುಗ್ಗಿ ಶುರುವಾಯಿತು. ಈಗಾಗಲೇ ಅನುದಾನಿತ ಕಾಲೇಜುಗಳಲ್ಲಿದ್ದ ಉತ್ತಮ ಶಿಕ್ಷಕರು ಮತ್ತು ಸುಸಜ್ಜಿತ ಪ್ರಯೋಗಾಲಯಗಳು ತುಕ್ಕು ಹಿಡಿಯಲು ಆರಂಭವಾಯಿತು. ಸಂಶೋಧನೆಗೆ, ಪ್ರಾಥಮಿಕ,

ಪ್ರೌಢಶಾಲೆಗಳ ಶಿಕ್ಷಕರಿಗೆ ಅತ್ಯಂತ ಅಗತ್ಯವಾಗಿ ಬೇಕಾದ ಮೂಲಭೂತ ವಿಜ್ಞಾನಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರಗಳು ಮೂಲೆಗುಂಪಾದವು. ಎಲ್ಲರ ಬಾಯಲ್ಲೂ ಕಂಪ್ಯೂಟರ್ ಗಾಯತ್ರಿ ಮಂತ್ರವಾಯಿತು. ಶಿಕ್ಷಕರ ದೃಷ್ಟಿಯಲ್ಲಿ ಹೇಳುವುದಾದರೆ ಖಾಯಂ ಆಗಿದ್ದ ಕಾಲೇಜು ಶಿಕ್ಷಕರಿಗೆ ಕೆಲಸದ ಅವಧಿ ಕಡಿಮೆಯಾಗಿ ಕನಿಷ್ಠ ವಾರಕ್ಕೆ ೨೦ ಘಂಟೆ ಬದಲು ೧೬ ಘಂಟೆಗಳೂ ಇಲ್ಲದೆ ಆ ಕಾಲೇಜಿನಿಂದ ಬೇರೆ ಕಾಲೇಜಿಗೆ ವರ್ಗವಾಗುವುದು ಅನಿವಾರ್ಯವಾಯಿತು, ಇದರ ಪರಿಣಾಮ ಶಿಕ್ಷಕರಿಗೆ ತಮ್ಮ ಕಾಲೇಜು ಎಂಬ ಪ್ರೀತಿ ಮಾಯವಾಯಿತು. ಪ್ರೀತಿ ಕಳೆದುಕೊಂಡ ಕಾಲೇಜು ಬರಿಯ ಕಲ್ಲಿನ ಕಟ್ಟಡವಾಯಿತು. ಇನ್ನು ಸಮಾಜದ ದೃಷ್ಟಿಯಿಂದ ನೋಡಿದರೆ ಮುಂದಿನ ಜನಾಂಗಕ್ಕೆ ಬೇಕಾದ ಅತ್ಯಗತ್ಯವಾದ ಮೂಲಭೂತ ವಿಜ್ಞಾನದ ವಿಷಯಗಳು ತಲುಪಿಸುವ ಒಂದು ಮಹಾದ್ವಾರ ಮುಚ್ಚಿಕೊಂಡಿತು. ಗಣಿತ ಬಾರದ ಗ್ರಾಮರ್ ಬಾರದ ಯುವ ಜನಾಂಗ ಸೃಷ್ಟಿಯಾಗುತ್ತಿದೆಯೇ ಸಂಶೋಧನೆಗೆ ಬಹು ಮುಖ್ಯವಾದ ಮೂಲಭೂತ ವಿಜ್ಞಾನದ ವಿಷಯಗಳನ್ನು ಹಿಂದಿನ ಬೆಂಚಿಗೆ ತಳ್ಳಿ ಗಣಿತ ಗೊತ್ತಿಲ್ಲದೆ ಗೋಸುಂಬಿ ಜಗತ್ತನ್ನು ಸೃಷ್ಟಿ ಮಾಡುತ್ತಿದ್ದೇವೆಯೇ?

ಮೂಲ ವಿಜ್ಞಾನದ ವಿಷಯಗಳನ್ನು ದೂರ ಮಾಡಲು ಮತ್ತೊಂದು ಮುಖ್ಯ ಕಾರಣ. ಇಂಜನೀಯರಿಂಗ್‌ನ ಆಕರ್ಷಣೆ. ನಾವು ಜಾಗತಿಕ ಹಳ್ಳಿಯ ಭಾಗವೆಂದು ಪರಿಗಣಿಸಿ. ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣವನ್ನು ಆರತಿ ಹಿಡಿದುಕೊಂಡು ಸ್ವಾಗತಿಸಿದ್ದೇವೆ, ಇನ್ನು ಹಿಂತಿರುಗಿ ನೋಡುವಂತಿಲ್ಲ. ನಾವು ಬಹಳ ದೂರ ಆ ದಾರಿಯಲ್ಲಿ ಕ್ರಮಿಸಿದ್ದೇವೆ. ಇದರ ಪ್ರತಿಫಲವೆಂದರೆ ಎಲ್ಲಿ ನೋಡಿದರೂ ನಾಯಿ ಕೊಡೆಗಳಂತೆ ಇಂಜನೀಯರ್ ಕಾಲೇಜು ಸ್ಥಾಪನೆಗೊಂಡವು. ಬೆಂಗಳೂರಿನಲ್ಲೇ ೫೭ ಇಂಜನೀಯರಿಂಗ್ ಕಾಲೇಜುಗಳಿವೆ. ಮೂಲವಿಜ್ಞಾನಗಳಿಗೆ ವಿದ್ಯಾರ್ಥಿಗಳ ಕೊರತೆ ಹೋಗಲಿ ಈ ಇಂಜನೀಯರ್ ಕಾಲೇಜುಗಳಿಗೇ ವಿದ್ಯಾರ್ಥಿಗಳ. ಇರಲಿಲ್ಲ. ಎಲ್ಲಿ ನೋಡಿದರೂ ಕಾಲೇಜಿನ ಏಜೆಂಟರು ಹುಟ್ಟಿಕೊಂಡರು. ಕರ್ನಾಟಕದಲ್ಲಿ ೫ ಸಾವಿರ. ಆಂಧ್ರಪ್ರದೇಶದಲ್ಲಿ ೧೯ ಸಾವಿರ ಮತ್ತು ತಮಿಳು ನಾಡಿನಲ್ಲಿ ೨೪ ಸಾವಿರ ಇಂಜನೀಯರ್ ಸೀಟುಗಳು ಖಾಲಿ ಇವೆಯಂತೆ. ಸಂಪ್ರದಾಯಕ ವಿಷಯಗಳೆಂದು ಇತಿಹಾಸ, ರಾಜನೀತಿ ಶಾಸ್ತ್ರ ದರ್ಶನ, ಅರ್ಥಶಾಸ್ತ್ರ, ಇನ್ನಿತರಗಳು ನಮ್ಮ ಜನಕ್ಕೆ ಬೇಡವೇ ಬೇಡ, ದರ್ಶನವನ್ನು ಓದಲು ದೇಶ ವಿದೇಶಗಳಿಂದ ನಮ್ಮ ದೇಶಕ್ಕೆ ಧಾವಿಸಿ ಬರುತ್ತಿರುವಾಗ ಇಲ್ಲಿ ದರ್ಶನವೇ ಇಲ್ಲ. ದರ್ಶನ ವಿಭಾಗ ಇಲ್ಲ. ದರ್ಶನಪಂಡಿತರಿಲ್ಲ. ಶಾಸನ ಓದಲು ಬಾರದ ಪಂಡಿತರ ಕಥೆಯೇ ಇದು. ಹಾಗಾದರೆ ಇಂಥ ಕಾಲೇಜುಗಳ ಭವಿಷ್ಯವೇನು? ಇವು ಅಪ್ರಯೋಜಕವೇ ೧೯೧೫ ರಲ್ಲೇ ಫಿರೋಜ್ ಷಾ ಮೆಹ್ತಾ–ರಾಷ್ಟ್ರೀಯ ಆಂದೋಲನದ ನಾಯಕ ಹೇಳಿದ "ಭಾರತದ ಪ್ರತಿಯೊಂದು ಕಾಲೇಜು ವಿಷಪೂರಿತ ಹಾವಿನ ಮೊಟ್ಟೆಗಳನ್ನು

ಮಾರಿ ಮಾಡುವ ಕೇಂದ್ರಗಳಾಗುತ್ತಿವೆ". ಈಗಿನ ಕಥೆಯಂತೂ ಇನ್ನೂ ಘೋರ.

ಈಗ ಒಂದು ಸುದ್ದಿ ಇದೆ. ಪುನಃ ಕರ್ನಾಟಕ ಸರ್ಕಾರ ಖಾಸಗಿ ಕಾಲೇಜುಗಳಿಗೆ ಶೇಕಡಾ ೮೦ ರಷ್ಟು ಅನುದಾನವನ್ನು ತರಲು ಮತ್ತು ಅನುದಾನ ಪದ್ಧತಿಯಲ್ಲಿ "ಆಮೂಲಾಗ್ರ ಬದಲಾವಣೆ" ಮಾಡಲು ನಿರ್ಧರಿಸಿದೆ; ಇತಿಹಾಸ ಪುನರಾವರ್ತನೆಯಾಗುತ್ತಿದೆಯೆ? ಇದರ ಪರಿಣಾಮ ಆಡಳಿತ ಮಂಡಳಿಯವರ ಮೇಲೆ ಹೆಚ್ಚು ಭಾರ ಬೀಳುತ್ತದೆ. ಅವರು ಅದನ್ನು ವಿದ್ಯಾರ್ಥಿಗಳಿಗೆ ವರ್ಗ ಮಾಡುತ್ತಾರೆ. ಹೀಗಾಗಿ ಬಡವರು ಬಿಡಿ. ಮಧ್ಯಮ ವರ್ಗದವರೂ ಸಹ. ಕಲಾವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳಿಗೆ ಮಕ್ಕಳನ್ನು ಕಳುಹಿಸಲಾಗುವುದಿಲ್ಲ. ಅಥವಾ ಒಳ್ಳೆಯ ಸಂಬಳ ಕೊಡದೆ ಹೇಗಾದರೂ ಮಾಡಿ ಅನುದಾನ ರಹಿತ ಕಾಲೇಜು ಯಾವ ಸೌಲಭ್ಯಗಳೂ ಇಲ್ಲದೇ ನಡೆಯುತ್ತವೆ. ಹೀಗಾದರೆ ನಮ್ಮ ವಿದ್ಯಾರ್ಥಿಗಳು ಆಕಾಶದಷ್ಟು ಬೆಳೆಯುವಂತೆ, ಸಾಗರದಷ್ಟು ಆಳವಾಗಿರುವಂತೆ ಅನುಭಾವಿಯ ಗಂಭೀರತೆ ಮತ್ತು ಆಜ್ಞೇಯುವಾದಿಯ ವೈಶಾಲ್ಯತೆಗಳನ್ನು ಹೊತ್ತುಕೊಂಡು ವಿವೇಕಾನಂದರು ಹೇಳುವಂತೆ ಬೆಳೆಯುವುದು, ವಿಕಾಸವಾಗುವುದು ಹೇಗೆ?

ಇದೆಲ್ಲವೂ ಸಾಲದೆಂಬಂತೆ ಇನ್ನೊಂದು ಹೊಸ ಸಂಸ್ಥೆ. "ರಾಷ್ಟ್ರೀಯ ಪರಿಶೀಲನಾ ಮತ್ತು ಅರ್ಹತಾ ಮಂಡಳಿ" ಯನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ೧೯೯೪ ರಲ್ಲಿ ಸ್ಥಾಪಿಸಿದೆ. ಈ ಮಂಡಳಿಯು ದೇಶದಲ್ಲಿರುವ ಸುಮಾರು ಹನ್ನೆರಡು ಸಾವಿರ ಕಾಲೇಜುಗಳನ್ನು ಮತ್ತು ೨೬೦ ವಿಶ್ವವಿದ್ಯಾನಿಲಯಗಳನ್ನು ತೂಗಿ ಆಯಾ ಸಂಸ್ಥೆಗಳಿಗೆ ಅವುಗಳ ಯೋಗ್ಯತಾನುಸಾರ ನಕ್ಷತ್ರಗಳನ್ನು ನೀಡುತ್ತದೆ. ಈ ನಕ್ಷತ್ರಗಳನ್ನು ೨೦೦೩ರ ಡಿಸೆಂಬರ್‌ದೊಳಗೆ ಪಡೆಯದಿದ್ದರೆ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದಿಂದ ಯಾವ ಕೆಲಸಕ್ಕೂ ಸಹಾಯಧನ ಬರುವುದಿಲ್ಲವಂತೆ! ಸರಕಾರ ಕಾಲೇಜಿನ ಶಿಕ್ಷಣವನ್ನು ಉನ್ನತ ಶಿಕ್ಷಣವೆಂದು ಅದನ್ನು ಅಗತ್ಯವಿದ್ದವರು ಅದಕ್ಕೆ ಬೆಲೆ ತೆತ್ತು ಪಡೆಯಬೇಕೆಂದು ಘೋಷಿಸಿದೆ. ಇದು ಭಾರತದ ಸಂವಿಧಾನದ ಪೂರ್ವ ಆವತರಣಿಕೆಯಲ್ಲಿ ಪ್ರತಿಪಾದಿಸಿದ ಸಮಾನತೆಗೆ ಸಂಪೂರ್ಣ ವಿರುದ್ಧವಾದದು.

ಇಷ್ಟಾಗಿ ಪ್ರಾಥಮಿಕ ಶಾಲೆಗಳನ್ನು ಸರ್ಕಾರ ವ್ಯವಸ್ಥಿತವಾಗಿ ನಡೆಸಿವೆಯೇ- ಹಳ್ಳಿಗಳಲ್ಲಿರುವ ೧ ಲಕ್ಷ ೧೨ ಸಾವಿರ ಪ್ರಾಥಮಿಕ ಶಾಲೆಗಳು ಏಕ ಶಿಕ್ಷಕ ಶಾಲೆಗಳಾಗಿವೆ. ೪೦೦೦ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ೨೬ ಸಾವಿರ ಪ್ರಾಥಮಿಕ ಶಾಲೆಗಳಿಗೆ ಶಾಲಾ ಕಟ್ಟಡವೇ ಇಲ್ಲ.

ಅನುದಾನ ಇಲ್ಲದೇ, ತಾಂತ್ರಿಕ ಕೋರ್ಸುಗಳನ್ನು ಹಿಮ್ಮೆಟ್ಟಿಸಲಾಗದೇ ನೇಮಕಾತಿ ಇಲ್ಲದೇ ನಕ್ಷತ್ರಕ್ಕಾಗಿ ಹೊಡೆದಾಡಬೇಕಾದ ಪರಿಸ್ಥಿತಿಗೆ ನಮ್ಮ ಕಾಲೇಜುಗಳು ನೂಕಲ್ಪಟ್ಟಿವೆ. ಅಯ್ಯೋ ಕಾಲೇಜುಗಳೇ ★

ಪ್ರಚಲಿತ

ನೈತಿಕ ಅಧಃಪತನವೆಂದರೆ ಅಂತಸತ್ವದ ಸರ್ವನಾಶ!

ಟಿ. ಜಿ. ಎಸ್. ಜಾರ್ಜ್

ದೇಶವೊಂದು ರಾಜಕೀಯ ಪ್ರಮಾದಗಳನ್ನು ಅರಗಿಸಿಕೊಳ್ಳಬಲ್ಲದು. ಆರ್ಥಿಕ ಹಿನ್ನಡೆ, ನಾಯಕತ್ವದ ವೈಫಲ್ಯ ಇತ್ಯಾದಿಗಳ ನಡುವೆಯೂ ತಲೆ ಎತ್ತಿ ನಿಲ್ಲುವ ಸಾಧ್ಯತೆ ಇರಬಲ್ಲದು. ಭಯೋತ್ಪಾದನೆಯೆಂಬ ಭೂತವನ್ನೂ ಮೆಟ್ಟಿ ಮೇಲೆದ್ದು ನಿಲ್ಲಲೂ ಸಾಧ್ಯವಿದೆ. ಆದರೆ ನೈತಿಕ ನೆಲೆಗಟ್ಟನ್ನು ಕಳೆದುಕೊಂಡರೆ ಆ ದೇಶಕ್ಕೆ ಭವಿಷ್ಯವಿಲ್ಲ.

ನಿಜ, ರಾಜನೀತಿಯ ಅಂಗವಾಗಿ ನೈತಿಕವಲ್ಲದ ಕೆಲವು ವಿಧಾನಗಳನ್ನು ಕೌಟಿಲ್ಯ ಪ್ರಸ್ತಾಪಿಸಿದ್ದಾನೆ, ವಂಚನೆ, ಕೊಲೆ, ಪೀಡನೆ ಮುಂತಾದ ವಿಧಾನಗಳನ್ನು ಬೋಧಿಸಿದ್ದಾನೆ. ಆದರೆ ಆಡಳಿತ ನ್ಯಾಯಪರವಾಗಿರಬೇಕೆನ್ನುವ ನೀತಿಗೆ ಆತ ಕಠೋರ ನಿಷ್ಠೆಯನ್ನು ಹೊಂದಿದ್ದವನಾಗಿದ್ದಾನೆ. ರಾಜನಾದವನಿಗೆ ಜನಕಲ್ಯಾಣಕ್ಕಿಂತಲೂ ದೊಡ್ಡದಾದ ಜವಾಬ್ದಾರಿ ಯಾವುದೂ ಇಲ್ಲ ಎನ್ನುವುದು ಆತನ ವಾದವಾಗಿತ್ತು. ಈ ಮಾತು ಇಂದಿನ 'ರಾಜಕಾರಣಿಗಳಿಗೆ' ಅನ್ವಯಿಸುವುದಿಲ್ಲ. ಸಾರ್ವಜನಿಕ ಜೀವನವನ್ನು ಕಲುಷಿತಗೊಳಿಸಿದ ಇತ್ತೀಚಿನ ನೈತಿಕ ಮಾಲಿನ್ಯಕಾರಕಗಳೆಂದರೆ ರಾಷ್ಟ್ರಪತಿಯೆಂಬ ಉಪಕರಣದ ತಯಾರಿಕೆಯಲ್ಲಿ ನಡೆದ ಸಂಚು. ಮತ್ತು ಮಹಾರಾಷ್ಟ್ರದ ಎಮ್ಮೆಲ್ಲೆಗಳೆಂಬ ಸರಕಿನ ಸಾಗಾಟ ಮತ್ತು ಮಾರಾಟ. ಇದು ಭ್ರಷ್ಟಾಚಾರಕ್ಕಿಂತಲೂ ವಿನಾಶಕಾರಿ ಕಾಯಿಲೆ ಇದು ಆತ್ಮಗಳಿಗೆ ಅಂಟಿದ ಪ್ಲೇಗು.

ಹಾಗೆ ನೋಡಿದರೆ ಪಿ. ಸಿ. ಅಲೆಕ್ಸಾಂಡರ್ ಹೆಸರಿನ ಹಾರಾಟದ ನಂತರ ಅಬ್ದುಲ್ ಕಲಾಂ ರಾಷ್ಟ್ರಪತಿ ಸ್ಥಾನಕ್ಕೆ ನಿಶ್ಚಯವಾಗಿರುವುದು ಸಮಾಧಾನಕರ ವಿಷಯವೇ. ಚಂಚಲವಾದ ನಿಷ್ಠೆಗಿಂತಲೂ ರಾಜಕೀಯ ಮುಗ್ಧತೆ ಎಷ್ಟೋ ಪಾಲು ಉತ್ತಮ. ಯಾರಿಗೆ ಗೊತ್ತು ಸಮಯ ಬಂದಾಗ ಕಲಾಂ ತಾವು ಮುಗ್ಧರಲ್ಲವೆಂದು ತೋರಿ ಎಲ್ಲರನ್ನು ಚಕಿತಗೊಳಿಸಬಹುದು.

ಆರಂಭದಲ್ಲಿ ಕೆ.ಆರ್. ನಾರಾಯಣನ್ ಅವರನ್ನು ಮೃದು ಜೇಡಿ ಮಣ್ಣೆಂದೇ ಎಲ್ಲರೂ ಬಗೆದಿದ್ದರು. ಆದರೆ ಕೊನೆಯಲ್ಲಿ ಆಗಿದ್ದೇನು? ಅದೇನೇ ಇರಲಿ, ಈಗ ಬಯಲಾಗಿದ್ದು ಈ ದೊಂಬರಾಟದ ಹಿಂದಿನ ರಾಜಕೀಯದ ಕೊಳಕು. ನಾಟಕವೇ ಮೊದಲ ಅಂಕವೇ ಇದನ್ನು ಬಟಾಬಯಲು ಮಾಡಿ ಬಿಟ್ಟಿತು.

ಪಕ್ಷಗಳಿಗಿಂತ ದೇಶದ ಹಿತ ದೊಡ್ಡದೆಂದು ನಾರಾಯಣನ್ ತೋರಿಸಿದರು. ಆದರೆ ದೇಶಕ್ಕಿಂತ ಪಕ್ಷದ ಹಿತ ದೊಡ್ಡದೆಂದು ನಂಬಿದವರಿಗೆ ಇದು ಪಥ್ಯವಾಗಲಿಲ್ಲ.

ನಾರಾಯಣನ್‌ರ ಮುಂದುವರಿಕೆಯನ್ನು ತಡೆಯಲು ಕೊಡಲಾದ ಕಾರಣ ರಾಷ್ಟ್ರಪತಿ ಎರಡನೇ ಅವಧಿಗೆ ಮುಂದುವರಿದ ಮೇಲ್ಪಂಕ್ತಿ ಇಲ್ಲ ಎಂದು. ಇದು ಬೂಟಾಟಿಕೆ. ಮೇಲ್ಪಂಕ್ತಿಯೋ ಸಂಪ್ರದಾಯವೋ ಮಾನದಂಡವಾಗಿದ್ದರೆ ಉಪ ರಾಷ್ಟ್ರಪತಿ ತಾವೇತಾವಾಗಿ ರಾಷ್ಟ್ರಪತಿ ಅಭ್ಯರ್ಥಿಯಾಗಬೇಕಾಗಿತ್ತು. ಆದರೆ ಕೃಷ್ಣಕಾಂತ್‌ರಿಗೂ ತಮ್ಮದೇ ಆದ ಸ್ವಂತ ಬುದ್ಧಿ ಎನ್ನುವುದೊಂದು ಇದೆ. ಸರ್ಕಾರಕ್ಕೆ ಬೇಕಾಗಿದ್ದುದು ಒಂದು ರಬ್ಬರ್ ಸ್ಟ್ಯಾಂಪ್.

ರಬ್ಬರ್ ಸ್ಟ್ಯಾಂಪ್ ಸಿಗುವುದು ಅಸಾಧ್ಯವೆಂದು ತಿಳಿದಾಗ ಅವರು ಹಿಂಬಾಗಿಲ ಅಪಹರಣಕ್ಕೆ ಹೊರಟರು. ವಿಶ್ವಮಾನ್ಯತೆ ಪಡೆದಿರುವ ಕಲಾಂ ಹೆಸರನ್ನು ಪ್ರತಿಪಕ್ಷದ ಮುಲಾಯಂ ಸಿಂಗ್ ಮೊದಲೇ ಪ್ರಸ್ತಾಪಿಸಿದ್ದರು. ಮೊದಲು ಈ ಹೆಸರನ್ನು ಎಲ್ಲಾ ಗುಂಪುಗಳು ಮುಂದಿಟ್ಟು ಒಮ್ಮತ ಪಡೆದು ಅನಂತರ ದೇಶದ ಜನತೆಯ ಮುಂದಿಡಬೇಕಾಗಿತ್ತು. ಆದರೆ ಆಗಿದ್ದೇನು? ಕಲಾಂ ಅವರನ್ನು ಆಡಳಿತ ಪಕ್ಷದ ಅಭ್ಯರ್ಥಿ ಎಂದು ತೋರಿಸಲಾಯಿತು. ಅವರ ಹೆಸರನ್ನು ಅಲ್ಪ ಮನೋಭಾವದ ಪಕ್ಷವೊಂದು ತನ್ನ ಪ್ರತಿಷ್ಠೆಗಾಗಿ ಬಳಸಿಕೊಂಡಿತು. ಕಲಾಂ ಇದಕ್ಕಿಂತಲೂ ಹೆಚ್ಚಿನ ಗೌರವಕ್ಕೆ ಅರ್ಹರಾದವರು. ನಮ್ಮ ರಾಜಕೀಯ ನೈತಿಕತೆಗೆ ಇದಕ್ಕಿಂತಲೂ ಹೆಚ್ಚಿನದು ಬೇಕಾಗಿತ್ತು.

ಕಳೆದ ವಾರವಷ್ಟೇ ಮಹಾರಾಷ್ಟ್ರದಲ್ಲಿ ನಮ್ಮ ಕಣ್ಣ ಮುಂದೆಯೇ ಎಮ್ಮೆಲ್ಲೆಗಳ ಮಾರಾಟ ಕೊಳ್ಳುಟ ರಾಜಾರೋಷವಾಗಿ ನಡೆದ ಮೇಲೆ ಇದಕ್ಕಿಂತಲೂ ಹೆಚ್ಚಿನದನ್ನು ನಿರೀಕ್ಷಿಸಲು ನಮಗೂ ಹಕ್ಕಿಲ್ಲ.

ಪ್ರಾಯಶಃ ಈ ಬಗೆಯ ವ್ಯಾಪಾರವನ್ನು ಕುದುರೆ ವ್ಯಾಪಾರ ಎಂದು ಕರೆಯುವುದನ್ನು ನಾವು ನಿಲ್ಲಿಸಬೇಕು. ಕುದುರೆ ಗೌರವಾನ್ವಿತ ಪ್ರಾಣಿ.

ಆಧುನಿಕ ಎಮ್ಮೆಲ್ಲೆಗಳು ದನಗಳ ವರ್ಗಕ್ಕೆ ಸೇರುತ್ತಾರೆ. ಇದಕ್ಕೆ ಅಲ್ಲೊಂದು ಇಲ್ಲೊಂದು ಹೊರತಾದ ಉದಾಹರಣೆಗಳೂ ಇವೆ.

ಮಾಧ್ಯಮಗಳಲ್ಲಿ ವರದಿಗಳು, ಛಾಯಾಚಿತ್ರಗಳು ಪ್ರಕಟವಾಗದೇ ಇದ್ದಿದ್ದರೆ ಲಜ್ಜೆಗೇಡಿತನದಿಂದ ಅವರು ರಾಜಕೀಯ ಡಕಾಯಿತಿಗೆ ಇಳಿದ ಪರಿಯನ್ನು ನಾವು ನಂಬಲು ಸಾಧ್ಯವಾಗುತ್ತಿರಲಿಲ್ಲ. ಕರ್ನಾಟಕ ಮುಖ್ಯಮಂತ್ರಿ ಅವರ ತಂಡವನ್ನು ಮದುವೆ ದಿಬ್ಬಣದಂತೆ ಉಪಚರಿಸಿದರು. ಇತರರಂತೆ ಅವರ ಪಕ್ಷ ಕೂಡಾ ಪ್ರಜಾತಂತ್ರವೆಂದರೆ ಮತದಾರರನ್ನು ವಂಚಿಸುವುದು ಎಂದು ಅರ್ಥೈಸಿಕೊಂಡಿದೆ.

ಎಮ್ಮೆಲ್ಲೆಗಳ ಗುಣವನ್ನು ಬಯಲಿಗೆಳೆಯುವ ಇನ್ನೊಂದು ಪ್ರಕರಣ ಉತ್ತರ ಪ್ರದೇಶದಲ್ಲಿ ಬೆಳಕಿಗೆ ಬಂದಿದೆ. ಕಳೆದ ಚುನಾವಣೆಯಲ್ಲಿ ಸೋತ ಶಾಸಕರು ತಮ್ಮ ಸರ್ಕಾರಿ ಭವನವನ್ನು ಖಾಲಿ ಮಾಡಿದರು. ಜತೆಯಲ್ಲಿ ಅಲ್ಲಿನ ಕುರ್ಚಿ ಮೇಜುಗಳು,

ವಿದ್ಯುತ್ ಉಪಕರಣಗಳು ಮತ್ತು ಸಿಕ್ಕಿದ್ದೆಲ್ಲವನ್ನೂ ಮನೆಗೆ ಕೊಂಡೊಯ್ದರು. ಎಂಥಾ ನಾಗರಿಕತೆ! ನಿಯಮಿತ ಕಾಲದ ಪಕ್ಷಾಂತರಕ್ಕೆ ಪಡೆಯುವ ಸೂಟ್‌ಕೇಸ್‌ಗಳು ಅವರಿಗೆ ಸಾಕಾಗಲಿಲ್ಲ. ಶಾಸಕರ ನಿಧಿ, ಪಿಂಚಣಿ ಅವರಿಗೆ ಸಾಲುವುದಿಲ್ಲ. ಮೂರು ಕಲು ಫ್ಯಾನನ್ನೂ ಕದ್ದು ಅವರು ಚಿಲ್ಲರೆ ಕಳ್ಳರಾಗಬೇಕು. ನೈತಿಕತೆ! ಯಾವ ನೈತಿಕತೆ?

ವಿವೇಚನೆ ಇಲ್ಲದವರ ತಾಯಿಯಂತಿರುವವರೊಬ್ಬರು ವಧುವಿನ ತಂದೆಯಾಗಿ ಮೊನ್ನೆ ಮಾಡಿದ್ದೇನು? ಶೋ ರೂಂಗಳಿಂದ ಕಾರುಗಳನ್ನು ಲಾಲೂ ಭಂಟರು ಕೊಂಡೊಯ್ದ ರೀತಿ ನಮಗೆ ಗೊತ್ತಿದೆ. ಅದರ ಜತೆಗೆ ಟ್ರಕ್ ಗಟ್ಟಲೆ ಪೀಠೋಪ ಕರಣಗಳನ್ನೂ ಅಂಗಡಿಗಳಿಂದ ತುಂಬಿಕೊಂಡು ಹೋದರು. ಆತನ ಸೇವಕರಂತಿ ರುವ ಪೋಲಿಸರು ಐಸ್‌ಕ್ರೀಂ ತಯಾರಕರನ್ನು ಬೆದರಿಸಿ ಕಾಣಿಕೆ ಸಲ್ಲಿಸುವಂತೆ ಮಾಡಿ ದರು. ಹಾಲಿನವರು, ತರಕಾರಿಯವರು, ಸಿಹಿತಿಂಡಿ ಅಂಗಡಿಗಳವರು ಕೂಡಾ ಇದನ್ನೇ ಮಾಡಬೇಕಾಯಿತು.

ಇಂಥಾ ಹೆದ್ದಾರಿ ದರೋಡೆಗೆ ಪರಿಹಾರ ದೊರಕಿಸುವ ಆಸ್ತಿ ಹಕ್ಕನ್ನು ನೀಡಿ ರುವ ಸಂವಿಧಾನ ಬೇರೊಂದು ದೇಶದಲ್ಲಿ ಇದೆಯೇ? ಅದೂ ರಕ್ಷಣೆಯೊಂದಿಗೆ? ಈ ಪ್ರಮಾಣದ ನೈತಿಕ ಮೌಲ್ಯಗಳ ಅಧಃಪತನ ನಮ್ಮನ್ನು ಆಂತರಿಕವಾಗಿ ಇನ್ನಷ್ಟು ನಾಶಮಾಡುತ್ತದೆ. ★

ಸನ್ಮಾನ್ಯರಿಂದ............

ತಮ್ಮ ಪ್ರಕಟನೆಯ ಜನಪದ ವಿಚಾರ ವೈಚಾರಿಕ ತಿಂಗಳ ಡೈಜೆಸ್ಟ್ ನಮ್ಮ ಪತ್ರಿಕಾಲಯಕ್ಕೆ ತಲುಪಿದೆ. ಇದೀಗ ಓದುತ್ತಿದ್ದೇವೆ. ಪತ್ರಿಕೆ ಪುನಶ್ಚೇತನ ಪಡೆದ ಸುದ್ದಿಯೇ ಚೇತೋಹಾರಿಯಾದದ್ದು.

ಎಂ. ಎನ್. ರಾಯ್ ರ ಕುರಿತು ಲೇಖನ ಡಾ|| ವೀಣಾ ಶಾಂತೇಶ್ವರದ ವಿಚಾರದೀಪ್ತಿ ದೇಶ ವಿಭಜನೆ ಮತ್ತು ಗಾಂಧಿ ಈ ಎಲ್ಲ ಲೇಖನಗಳು ಹೊಸ ಹೊಳಪನ್ನು ನೀಡುವುದು ಸತ್ಯ. ಈ ಪತ್ರಿಕೆ ನಿರಂತರವಾಗಿ ಪ್ರಕಟವಾಗಲಿ ಎಂಬುದೇ ನಮ್ಮ ಹಾರೈಕೆ.

ಸಂಪಾದಕ

ಬಳಕೆ-ತಿಳುವಳಿಕೆ

ಒಂದು ಸ್ಮರಣೆ

ಜ್ಞಾನ ತಪಸ್ವಿನಿ ಶ್ರೀಮತಿ ದುರ್ಗಾ ಭಾಗವತ್

–ಗೌರುಭಟ್ ಪೆರ್ಲ

ಸಮಕಾಲಿನ ಹಿರಿಯ ಮರಾಠಿ ಸಾಹಿತಿ ದುರ್ಗಾ ಭಾಗವತರು ಇನ್ನಿಲ್ಲ. ಜ್ಞಾನತಪಸ್ವಿನಿಯಾದ ಅವರನ್ನು ಮರೆಯಲು ಅಸಾಧ್ಯ. ೯೨ ವರ್ಷದ ತುಂಬು ಬಾಳನ್ನು ಬದುಕಿದ ಆವರ ಅನುಭವಗಳು ಅನೇಕ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವಶಾಸ್ತ್ರದ ಅಧ್ಯಯನಕ್ಕಾಗಿ ಖ್ಯಾತಿ ಪಡೆದ ದುರ್ಗಾಬಾಯಿ ಮೇಧಾವಿಯಾಗಿ, ಬೆರಗುಗೊಳಿಸುವಂತೆ ಆಂಗ್ಲಭಾಷೆ; ಸಂಸ್ಕೃತ ಮತ್ತು ಬೌದ್ಧಮತ ಮುಂತಾದ ವಿಷಯಗಳಲ್ಲಿ ತಮ್ಮ ಸಾಮರ್ಥ್ಯ ಶಕ್ತಿಯನ್ನು ಪ್ರದರ್ಶಿಸಿದರು. ಬುಡಕಟ್ಟು ಜನರ ವಿಷಯವನ್ನು ತಮ್ಮ ಪಿ.ಎಚ್.ಡಿ.ಗೆ ಆಯ್ಕೆ ಮಾಡಿಕೊಂಡು ಅದಕ್ಕಾಗಿ ದುರ್ಗಮವಾದ ಮಧ್ಯಪ್ರದೇಶದಲ್ಲಿ ನೆಲಸಿ ಆರು ವರ್ಷಗಳನ್ನು ಕಳೆದರು. ೧೯೫೦ ರಿಂದ ೧೯೭೫ರಲ್ಲಿ ಅವರು ಶಿಕ್ಷಣಕ್ಕೆ ಸಂಬಂಧಿಸಿದ ವಿಶೇಷ ಜ್ಞಾನವನ್ನು ಸಂಪಾದಿಸಿ ಗದ್ಯಸಾಹಿತ್ಯದ ಪರಿಣತ ಲೇಖಕಿ ಎಂದೂ ಗುರುತಿಸಲ್ಪಟ್ಟರು, ಜಾನಪದ ವಾಙ್ಮಯಕ್ಕೆ ಸಾಹಿತ್ಯ ಪ್ರಕಾರದಲ್ಲಿ ಅಗ್ರಸ್ಥಾನ ತಂದಿತ್ತವರು ದುರ್ಗಾ ಭಾಗವತ್,

೧೯೭೫ರಲ್ಲಿ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಆ ವೇದಿಕೆಯಲ್ಲಿ ವಾಕ್ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಿದ ದುರ್ಗಾ ಭಾಗವತರನ್ನು ನೆನೆಯಬೇಕು. ತುರ್ತುಪರಿಸ್ಥಿತಿಯು ಕರಿಮೋಡ ದೇಶವನ್ನು ಆವರಿಸಿದ್ದಾಗ, ಮರಾಠಿ ಸಾಹಿತ್ಯ ಸಮ್ಮೇಳನ ಅಧ್ಯಕ್ಷೆಯಾಗಿ ಮುಚ್ಚುಮರೆ ಇಲ್ಲದೆ ಜಿಜ್ಞಾಸಾವೃತ್ತಿನಲ್ಲಿ ತುರ್ತುಪರಿಸ್ಥಿತಿಗೆ ವಿರೋಧವಾಗಿ ಮಾತನಾಡಿದುದರಿಂದಾಗಿ ಅವರನ್ನು ೧೯೭೫ರಲ್ಲಿ ಸೆರೆಮನೆಗೆ ತಳ್ಳಲಾಯಿತು.

ಸೆರೆಮನೆಯಲ್ಲೂ ಅವರ ಪಾತ್ರ ಐತಿಹಾಸಿಕವೇ ಆಯಿತು. ಸೆರೆಮನೆಯ ನಿಯಮಗಳನ್ನೂ ಪ್ರಶ್ನಿಸಿದ ದಿಟ್ಟ ಮಹಿಳೆ ದುರ್ಗಾಬಾಯಿ. ಯೂಸುಫ್ ಪಟೇಲರೂ ಅವರೊಂದಿಗೆ ಸೆರೆಮನೆಯಲ್ಲಿದ್ದರು. ಆಗ ಒಂದು ಬಾರಿ ಅವರು ದುರ್ಗಾಬಾಯಿಯವರಿಗೆ ಒಂದು ಬುಟ್ಟಿ ತುಂಬ ಹಣ್ಣುಹಂಪಲವನ್ನು ಕೊಟ್ಟರು, ಬೇಕಿಕೊಳ್ಳಿಯೆಂದು ಹೆಸರು ಪಡೆದ ದುರ್ಗಾಬಾಯಿಯವರು ಸೆರೆಮನೆಯ ಸೂಪರಿಂಟೆಂಡೆಟರಿಗೆ ದೂರು ಕೊಟ್ಟರು! ನಿಜಾಂಶವನ್ನು ಕಂಡುಹಿಡಿದು ಸಂದೇಹವನ್ನು ಪರಿಹಾರ ಮಾಡುವುದು ದುರ್ಗಾಬಾಯಿಯವರ ಸ್ವಭಾವ. ಉತ್ಸಾಹ ತಗ್ಗದ ಆಲಸ್ಯವಿಲ್ಲದ ವಾಗ್ಯುದ್ಧಕ್ಕೆ ಯಾವಾಗಲೂ ಅವರಲ್ಲಿ ಮೊದಲ ಸ್ಥಾನ. ಹಾಗಾಗಿ ಅವರು

ಯಾರಿಗೂ ಹೆದರಲಿಲ್ಲ. ಯಾರಿಗೂ ಮಣಿಯಲಿಲ್ಲ. ಅವರು ದೃಢವಾಗಿ ಹೇಳು ತ್ತಾರೆ. "ನಾನು ಸತ್ಯವನ್ನೇ ಹೇಳುತ್ತೇನೆ. ಏಕೆಂದರೆ ನಾನೊಬ್ಬ ಲೇಖಕಿ," ಹೀಗೆ ಅವರ ಬಿಚ್ಚು ನುಡಿಗಾಗಿ ಅವರು ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ಬೆಂಕಿಯ ಚೆಂಡಾಗಿದ್ದರು.

ದುರ್ಗಾಬಾಯಿಯವರು ಬಿಚ್ಚುಮಾತಿನ ಧೀಮಂತರಾಗಿರುವುದರೊಂದಿಗೆ ಅತ್ಯಂತ ಸಾರವತ್ತಾದ ಮಹಿಳೆ ಎಂದು ಹೆಸರು ಪಡೆದವರು. ಬಿಗಿಯಾದ ಮಾತು ಗಳ ಲೇಖಕಿ ಎನ್ನುವ ಜತೆಯಲ್ಲೇ ಸ್ತ್ರೀ ಸಹಜವಾದ ರಮ್ಯತೆ ಹೊಂದಿರುವ ವಿಶಿಷ್ಟ ಮಹಿಳೆ ಆಕೆ. ಅವರು ಹೆಣಿಗೆ ಕೆಲಸ, ಕಸೂತಿ ಅಲ್ಲದೆ ಪಾಕಕಲೆಯಲ್ಲೂ ಪರಿಣತರು. ವಿಚಾರಗೋಷ್ಠಿಯಾಗಲಿ ಸಮ್ಮೇಳನವಾಗಲಿ, ಸಾಮಾಜಿಕ ಸಮಸ್ಯೆಗಳನ್ನು ಕುರಿತು ಪ್ರೌಢವಾಗಿ ಮಾತಾಡುವ ಸಾಮರ್ಥ್ಯ ಹೊಂದಿದ್ದ ದುರ್ಗಾಬಾಯಿಯವರು ಗಂಟೆ ಗಟ್ಟಲೆ ಅನಕ್ಷರಸ್ಥ ಮಹಿಳೆಯರೊಂದಿಗೂ ಸಲಿಗೆಯಿಂದ ಹರಟೆ ಹೊಡೆಯುವ ಶಕ್ತಿ ಪಡೆದಿದ್ದರು,

ದುರ್ಗಾಬಾಯಿ ಅಡಿಗೆ ಮನೆಯ ಮಾತಿನಲ್ಲೂ ಚಾತುರ್ಯ ಮೆರೆಯುತ್ತಿ ದ್ದರು. ಅವರ ಪ್ರಕಾರ ರೊಟ್ಟಿ ಬೇಯಿಸುವುದೂ ಕಾಯಿಸುವುದೂ ಒಂದು ಕಲೆ. ಕಣಕ ಮಾಡುವಾಗ ಹಿಟ್ಟುನಾದುವ ಸೂಕ್ಷ್ಮ ವಿಚಾರಗಳನ್ನೂ ಹೇಳುತ್ತಿದ್ದರು. ಅವರು ೮೪ರ ಪ್ರಾಯದಲ್ಲೂ ಸಾಹಿತಿಯಾಗಿ ಜೀವನ ಕಲೆಯನ್ನು ಕುರಿತು ಬರೆದು ಓದುಗರನ್ನು ವಿಸ್ಮಯ ಪಡಿಸುತ್ತಿದ್ದರು. ಉದಾಹರಣೆಗಾಗಿ ಪಾಕಶಾಸ್ತ್ರದ ಪರಂಪರೆ ಯನ್ನು ಮಹಾಭಾರತದಲ್ಲಿ ಹೆಸರಾದ ಪುರಾಣಕಾಲದ ಭೀಮ ಮತ್ತು ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯ್ಕವಾಡರು ಸಂಪನ್ನಗೊಳಿಸಿದರು ಎಂದು ದುರ್ಗಾಭಾಗವತರು ಬರೆದರು. ಪ್ರತಿವಾರ ಮರಾಠಿ ಸಂಜೆ ಪತ್ರಿಕೆಯೊಂದಕ್ಕೆ 'ಗೋಧಾದಿ' ಎಂಬ ಶೀರ್ಷಿಕೆಯಲ್ಲಿ ಭೂತ-ವರ್ತಮಾನದ ನೆನಪುಗಳನ್ನು ವ್ಯಕ್ತ ಮಾಡುವ ಉತ್ತಮ ದರ್ಜೆಯ ಅಂಕಣಕಾರರಾಗಿದ್ದರು.

ಆರೋಗ್ಯ ಕಳೆದುಕೊಂಡು ಬದುಕಿನಲ್ಲಿ ಏಕಾಂಗಿಯಾಗುಳಿದರು. ವೃದ್ಧಾ ವಸ್ಥೆಯಲ್ಲಿ ಅವರ ಚಟುವಟಿಕೆ ಕಡಿಮೆಯಾಯಿತು. ಈಗ ಇಹಲೋಕವನ್ನು ತ್ಯಜಿಸಿ ನಮ್ಮಿಂದಲೂ ದೂರವಾಗಿದ್ದಾರೆ. ಆದರೆ ಅವರ ನೆನಪು ಶಾಶ್ವತ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಕರ್ನಾಟಕ ರಾಜ್ಯದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸಮ್ಮೇಳನಕ್ಕೆ ಅತಿಥಿಯಾಗಿ ಬಂದ ದುರ್ಗಾಭಾಗವತರನ್ನು ಸಭೆಯಲ್ಲಿ ಹಾರಹಾಕಿ ನಮಸ್ಕರಿಸಿದ ನಾನು ಭಾಗ್ಯಶಾಲಿ ಎಂದು ಭಾವಿಸಿರುವೆ. ★

('ಉತ್ಥಾನ'ದ ಸಾಭಾರ)

ಭಯೋತ್ಪಾದನೆಯನ್ನು ನಿರ್ನಾಮ ಮಾಡಿ

– ರಾಜೀವ್ ಗಾಂಧಿ

೧೯೮೬ ರ ಆಗಸ್ಟ್ ೧೫ ರಂದು ಮಾಜಿ ಪ್ರಧಾನ ಮಂತ್ರಿ (ಶ್ರೀ ರಾಜೀವಗಾಂಧಿಯವರು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕೆಂಪು ಕೋಟೆಯ ಮೇಲಿಂದ ಮಾಡಿದ ಭಾಷಣ. ರಾಜೀವ ಗಾಂಧಿಯವರ ಜನ್ಮದಿನೋತ್ಸವ ಸಂದರ್ಭದಲ್ಲಿ ಈ ಲೇಖನದ ಪ್ರಕಟಣೆ–ಸಂ)

ನಾವು ಈದಿನ ಕೆಂಪುಕೋಟೆಯಲ್ಲಿ ನಲವತ್ತನೆಯ ಸಲ ಒಟ್ಟು ಗೂಡುತ್ತಿದ್ದೇವೆ. ಈ ಕೆಂಪುಕೋಟೆಯು ಭಾರತದ ವೈಭವದ ಸಂಕೇತ. ಇದು ಭಾರತದ ಶಕ್ತಿಯ ಸಂಕೇತ. ಈ ಸ್ಥಳದಿಂದಲೇ, ೧೮೫೭ ರಲ್ಲಿ ಸ್ವಾತಂತ್ರ್ಯದ ಮೊದಲನೆಯ ಕೂಗನ್ನು ಘೋಷಿಸಿದ್ದರು. ಈ ಸ್ಥಳದಲ್ಲೇ ಸುಭಾಷ್ ಚಂದ್ರಬೋಸರ ಅನುಯಾಯಿಗಳಾದ ಷಾಹನವಾಜ್, ಧಿಲ್ಲಾನ್ ಮತ್ತು ಸಹಗಲ್‌ರವರು ವಿಚಾರಣೆಗೊಳಪಟ್ಟರು. ದೇಶಭಕ್ತಿಗಾಗಿ ಅವರು ಮಾಡಿದ ತ್ಯಾಗಕ್ಕೆ ಮಿಗಿಲಾದುದು ಬೇರೊಂದಿಲ್ಲ. ಈ ಸ್ಥಳದಲ್ಲೇ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿದುದು ಮತ್ತು ಮೊದಲ ಬಾರಿಗೆ ಭಾರತ ತ್ರಿವರ್ಣ ಧ್ವಜವನ್ನು ಪಂಡಿತಜೀ ಆರೋಹಣ ಮಾಡಿದರು. ಈ ಧ್ವಜವು ನಮ್ಮ ಹೃದಯಕ್ಕೆ ಅಚ್ಚುಮೆಚ್ಚಿನದಾಗಿದ್ದು ನಮ್ಮ ಗಾಢವಾದ ಗೌರವವನ್ನು ಸಂಪಾದಿಸಿದೆ ಈ ಧ್ವಜದಡಿಯಲ್ಲಿ ದೇಶದ ರಕ್ಷಣೆಗಾಗಿ ಮತ್ತು ಪ್ರಗತಿಗಾಗಿ ಹೋರಾಡುತ್ತೇವೆ. ನಾವೆಲ್ಲರೂ ಭಾರತಮಾತೆಯ ಮಕ್ಕಳು. ನಾವು ಭಾರತವನ್ನು ಶಾಂತಿಯ ತವರನ್ನಾಗಿ ಮಾಡುತ್ತೇವೆ. ಭಾರತವನ್ನು ಸಂಪದ್ಭರಿತ ಭೂಮಿಯನ್ನಾಗಿ ಮಾಡುತ್ತೇವೆ.

ನಾವು ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆ. ಹಾಗೆಯೇ, ನಾವು ಸ್ವಾತಂತ್ರ್ಯವೆಂದರೆ ಏನೆಂದು ಅರ್ಥ ಮಾಡಿಕೊಂಡಿದ್ದೇವೆಯೇ? ನಾವು ಈ ದಿನ ಸಾಧಿಸಿದ ಸ್ವಾತಂತ್ರ್ಯವು ನಮಗೆ ಏನು ಅರ್ಥವನ್ನು ಕೊಡುತ್ತದೆ? ಸ್ವಾತಂತ್ರ್ಯವೆಂದರೆ ಜನಗಳ ಸ್ವಾತಂತ್ರ್ಯವೆಂದರ್ಥವೆ? ಅಥವಾ ನಮ್ಮ ಭೂಮಿ, ಅಡವಿಗಳು ಮತ್ತು ಸಮಗ್ರ ವಾತಾವರಣದ ಬಗ್ಗೆ ಯೋಚಿಸುತ್ತೇವೆಯೇ? ನಮ್ಮ ದೇಶದ ಅಭಿವೃದ್ಧಿ ಮತ್ತು ಪ್ರಗತಿಯನ್ನು ಕುರಿತು ಯೋಚಿಸುತ್ತೇವೆಯೇ? ಹೌದು, ಇವೆಲ್ಲಾ ಸ್ವಾತಂತ್ರ್ಯದ ಅಂಗಗಳಾಗಿವೆ. ಸ್ವಾತಂತ್ರ್ಯವು ಆಳವಾದ. ಮೂಲಭೂತ ಅರ್ಥವನ್ನು ಹೊಂದಿದೆ. ನಮ್ಮ ಪುರಾತನ ಸಂಸ್ಕೃತಿ, ನಮ್ಮ ಮೌಲ್ಯವನ್ನು ನಾವು ಮರೆಯುವಂತಿಲ್ಲ ಮತ್ತು ನಮ್ಮ ನೀತಿನಿಷ್ಠೆಯ ಮಾರ್ಗದಿಂದ ವಿಚಲಿತರಾಗಬಾರದು. ನಮ್ಮ ಸಂಪ್ರದಾಯವನ್ನು ಅನುಸರಿಸುವುದನ್ನು ಮತ್ತು ನಮ್ಮ ಪಿತ್ರಾರ್ಜಿತವನ್ನು ತಪ್ಪದೆ ಉಳಿಸಿಕೊಂಡು ಬರುವುದನ್ನು ನಾವು ಖಾತ್ರಿ ಮಾಡಿಕೊಳ್ಳಬೇಕು.

ಈ ಮೌಲ್ಯಗಳಾವುವು? ಪ್ರಧಾನವಾಗಿ ಕಾಣಿಸುವುದು ರಾಷ್ಟ್ರೀಯತೆಯ ಭಾವನೆ. ಈ ರಾಷ್ಟ್ರೀಯತೆಯ ಭಾವನೆಯು ಭಾರತಕ್ಕೇನೂ ಹೊಸದಲ್ಲ. ಇದು ಬಹಳ ಹಿಂದಿನ ಕಾಲದಿಂದಲೂ. ಸಾವಿರಾರು ವರ್ಷಗಳಿಂದಲೂ ಭಾರತದ ಪ್ರಜೆಗಳ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಗಾಢವಾಗಿ ನಾಟಿದೆ. ಇದನ್ನು ಉಚ್ಚಾಟನೆ ಮಾಡಲು ಯಾರಿಂದಲೂ ಸಾಧ್ಯವಾಗಿಲ್ಲ. ನಾವು ರಾಜಕೀಯ ಒಗ್ಗಟ್ಟನ್ನು ಹೊಂದಿರದಿದ್ದರೂ, ವಿದೇಶೀಯರ ಆಡಳಿತದ ಕೈ ಕೆಳಗಿದ್ದರೂ ಭಾರತೀಯರೆಂಬ ಭಾವನೆಯನ್ನು ನಮ್ಮಿಂದ ಅಳಿಸಿಹಾಕಲು ಯಾರಿಂದಲೂ ಸಾಧ್ಯವಾಗಿಲ್ಲ. ಇಂದಿನ ಸ್ವತಂತ್ರ ಭಾರತವು ವೈಭವ ಪೂರ್ಣ, ಸ್ವಾವಲಂಬಿತ, ಏಕತೆ ಮತ್ತು ಸಮಗ್ರತೆಗೆ ಕಟಿಬದ್ಧವಾಗಿರುವ ರಾಷ್ಟ್ರೀಯ ಭಾವೈಕ್ಯದ ನಿದರ್ಶನವಾಗಿದೆ.

ನಮ್ಮ ಏಕತೆಯೇ ನಮ್ಮ ಶಕ್ತಿ

ಭಾರತವು ಶಕ್ತಿಯುತವಾಗಿದ್ದರೆ ಪ್ರತಿ ಭಾರತೀಯನು ಬಲಶಾಲಿಯೇ. ಭಾರತವು ದುರ್ಬಲವಾಯಿತೆಂದರೆ ಪ್ರತಿ ಭಾರತೀಯನೂ ಬಲಹೀನನಾಗುತ್ತಾನೆ. ಭಾರತದ ಪ್ರಜೆಗಳನ್ನು ಶಕ್ತಿವಂತರನ್ನಾಗಿ ಮಾಡುವುದು ಮತ್ತು ದೇಶದ ಭವಿಷ್ಯತ್ತನ್ನು ಭದ್ರಪಡಿಸುವುದೇ ನಮ್ಮ ಸತತ ಪ್ರಯತ್ನ. ನಮ್ಮ ಸಾಮರ್ಥ್ಯದಲ್ಲೇ ನಮ್ಮ ಗೌರವ, ನಮ್ಮ ಏಳಿಗೆ ಅಡಕವಾಗಿದೆ. ಈ ದೇಶದ ನಿವಾಸಿಗಳೆಂದ ಮಾತ್ರಕ್ಕೆ ನಾವು ಭಾರತೀಯರೆಂದು ಪರಿಗಣಿಸಲಾಗುವುದಿಲ್ಲ. ಐದು ಸಾವಿರ ವರ್ಷಗಳ ಹಿಂದಿನಿಂದಲೂ ಬಂದಂತಹ ವೈಭವದ ಸಭ್ಯತೆಯ ಉತ್ತರಾಧಿಕಾರಿಗಳಾಗಿರುವುದರಿಂದಲೇ ನಾವು ಭಾರತೀಯರೆಂದೆನ್ನಿಸಿಕೊಳ್ಳುತ್ತೇವೆ. ನಮ್ಮಲ್ಲಿ ವಿಭಿನ್ನ ಸಂಸ್ಕೃತಿಗಳಿವೆ. ನಮ್ಮಲ್ಲಿ ಬೇರೆ ಬೇರೆ ಧರ್ಮಗಳಿವೆ—ಹಿಂದೂ, ಮುಸ್ಲಿಮ್, ಸಿಖ್, ಕ್ರಿಶ್ಚಿಯನ್, ಜೈನ್: ಪಾರ್ಸಿ. ಬೌದ್ಧ ಇತ್ಯಾದಿ. ನಾವು ಹಲವು ಬಗೆಯ ಭಾಷೆಗಳನ್ನು ಮಾತನಾಡುತ್ತೇವೆ. ನಮ್ಮ ಸಹನಾಶೀಲತೆಯು ಧರ್ಮಗಳೂ ಪ್ರವರ್ಧಮಾನಕ್ಕೆ ಬರುವಂತೆ ಮಾಡಿದೆ. ನಾವು ಎಲ್ಲ ಮತಧರ್ಮಗಳಿಗೂ ಸಮಾನ ಗೌರವವನ್ನು ನೀಡುತ್ತೇವೆ. ನಮ್ಮ ಶಕ್ತಿ ಮತ್ತು ಏಕತೆಯು ಈ ವಿಚಾರದಿಂದಲೇ ಕೂಡಿದೆ. ನಮ್ಮ ಶಕ್ತಿಯು ನಮ್ಮ ಈ ವಿವಿಧತೆಯಲ್ಲಿ ಅಡಕವಾಗಿರುವುದರಿಂದಲೇ ನಾವು ಈ ಮಾರ್ಗವೊಂದನ್ನೇ ಅನುಸರಿಸಬೇಕು.

ಸ್ವಾತಂತ್ರ್ಯವೆಂದರೆ, ನಮ್ಮ ಇಚ್ಛೆಯಂತೆ, ದೇಶವನ್ನು ಆಳಲು ಇರುವ ಅನುಕೂಲತೆ. ನಮ್ಮಂತೆಯೇ ಇತರ ಅನೇಕ ದೇಶಗಳು ಸ್ವಾತಂತ್ರ್ಯವನ್ನು ಸಂಪಾದಿಸಿದುವು. ಆದರೆ ಕಲವುದರಲ್ಲಿ ಮಾತ್ರವೆ, ನಮ್ಮ ಭಾರತದಂತೆ, ಪ್ರಜೆಗಳೇ ನಿಜವಾದ ಪ್ರಭುಗಳಾಗಿರುವುದನ್ನು ನಾವು ಕಾಣುತ್ತೇವೆ. ಭಾರತವು ತನ್ನ ಪೌರರಿಗೆ, ಎಲ್ಲ ಮಾನವ ಹಕ್ಕುಗಳನ್ನು ನೀಡಿದೆ. ನಾವು ಭಾರತವನ್ನು ಪರಾವರ್ತಿ

ಸುವಾಗ, ನಾವು ಇತರ ದೇಶಗಳನ್ನು ಪರಾವರ್ತಿಸಬೇಕು. ಭಾರತದ ಹಾದಿಯನ್ನೇ ಅನುಸರಿಸಲು ಸಮರ್ಥವಾದ ದೇಶಗಳು ಎಷ್ಟೆಂಬುದನ್ನು ನಾವು ನೋಡಬಹುದು. ನಮ್ಮ ಪ್ರಜೆಗಳಿಗೆ ಕೊಟ್ಟಂತಹ ಅದೇ ವಿಧವಾದ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕೊಡಲು ಸಮರ್ಥವಾದ ಮತ್ತು ಪ್ರಜಾತಂತ್ರವನ್ನು ಕಾಪಾಡಲು ಶಕ್ತವಾದ ದೇಶಗಳು ಎಷ್ಟೆಂಬುದನ್ನು ನಾವು ನೋಡಬೇಕು. ಭಾರತದಲ್ಲಿ ಸರ್ಕಾರವು ಕೈಯಲ್ಲಿದೆ. ಜನತೆಯು ಇಷ್ಟಪಟ್ಟಾಗ ಸರ್ಕಾರವನ್ನು ಬದಲಾಯಿಸಬಹುದು. ತಮ್ಮ ಭವಿಷ್ಯವನ್ನು ಅವರೇ ರೂಪಿಸಿಕೊಳ್ಳುತ್ತಾರೆ.

ಪ್ರಜಾತಂತ್ರಾತ್ಮಕ ಹಿನ್ನೆಲೆಯಲ್ಲಿ ಭಾರತವು ಅನಿರ್ಬಂಧಿತ ಚುನಾವಣೆಯನ್ನು ನಡೆಸಿತು. ನಮ್ಮಲ್ಲಿ ಪತ್ರಿಕಾ ಸ್ವಾತಂತ್ರ್ಯವಿದೆ. ಎಲ್ಲ ಪೌರರೂ ಸಮಾನವೆಂದು ನೋಡುವಂತಹ ನ್ಯಾಯಾಂಗವನ್ನು ನಾವು ಹೊಂದಿದ್ದೇವೆ ನಾವು ಪ್ರಜಾಸತ್ತಾತ್ಮಕ ಅಭಿವೃದ್ಧಿಯನ್ನು ಕೈಗೆತ್ತಿಕೊಂಡಿದ್ದೇವೆ. ನಮ್ಮ ಗುರಿಯು ಸ್ವಾವಲಂಬನೆ. ನಮ್ಮ ವಿದೇಶಾಂಗ ನೀತಿಯಲ್ಲಿ ಅಲಿಪ್ತ ನೀತಿಯನ್ನೇ ಪಾಲಿಸುತ್ತೇವೆ. ನಮ್ಮ ಮಾರ್ಗವು ಈ ಮೂರು ದೃಷ್ಟಿಗಳನ್ನೂ ಒಳಗೊಂಡಿದೆ.

ಪ್ರಗತಿಯ ಪಥದಲ್ಲಿ ಸ್ವತಂತ್ರ ಭಾರತ

ಭಾರತವು ಎಷ್ಟು ಏಳಿಗೆಯನ್ನು ಹೊಂದಿದೆ ಎಂಬುದನ್ನು ತಿಳಿಯಲು ನಾವು ಬ್ರಿಟಿಷ್ ಆಡಳಿತದ ಕಾಲದಲ್ಲಿದ್ದ ಸ್ಥಿತಿಗತಿಗಳನ್ನು ಜ್ಞಾಪಿಸಿಕೊಂಡರೆ ಸಾಕು. ಬ್ರಿಟಿಷರ ಆಡಳಿತ ಕಾಲದಲ್ಲಿ? ಹಸಿವಿನಿಂದ ಮತ್ತು ಕ್ಷಾಮದಿಂದ ಸಾವು ಸರ್ವೇಸಾಮಾನ್ಯವಾಗಿತ್ತೆಂಬುದು ನಿಮಗೆ ನೆನಪಿರಬಹುದು. ಸ್ವಾತಂತ್ರ್ಯಕ್ಕೆ ಸ್ವಲ್ಪ ಮುಂಚೆಯೇ, ೩೦ ಲಕ್ಷ ಜನ ಬಂಗಾಳ ಕ್ಷಾಮದಲ್ಲಿ ಸತ್ತರು. ೧೯೦೦ ರಿಂದ ೧೯೫೦ ರವರೆಗೆ ಅಂದರೆ ಈ ೫೦ ವರ್ಷಗಳಲ್ಲಿ ನಮ್ಮ ವ್ಯಾವಸಾಯಿಕ ಹುಟ್ಟುವಳಿಯು ಮುಂದಗತಿಯಲ್ಲಿದ್ದಿತು. ಆದರೆ ೧೯೫೦ ರಿಂದ ೧೯೮೫ ರೊಳಗೆ ನಮ್ಮ ವ್ಯಾವಸಾಯಿಕ ಹುಟ್ಟುವಳಿಯು ಮೂರರಷ್ಟು ಅಧಿಕವಾಯಿತು. ಗೋಧಿಯ ಹುಟ್ಟುವಳಿಯು ಏಳರಷ್ಟು ಮತ್ತು ಭತ್ತವು ಐದರಷ್ಟು ಜಾಸ್ತಿಯಾಯಿತು. ಈ ಶುಭ ಸಂದರ್ಭದಲ್ಲಿ ಭಾರತೀಯ ರೈತರಿಗೆ ಅಭಿನಂದಿಸಲು ಇಷ್ಟಪಡುತ್ತೇನೆ. ಅವರು ಕಷ್ಟಪಟ್ಟು ಕೆಲಸ ಮಾಡಿದ್ದರಿಂದ ನಾವು ಈದಿನ ಸ್ವತಂತ್ರವಾಗಿದ್ದೇವೆ.

ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಸ್ವಾತಂತ್ರ್ಯಕ್ಕೆ ಹಿಂದೆ ಶಿಶು ಮರಣ ಸಂಖ್ಯೆಯು ಬಹಳ ಜಾಸ್ತಿಯಾಗಿದ್ದಿತು. ಹುರುಪಿನ ಆರೋಗ್ಯ ಕಾರ್ಯಕ್ರಮವನ್ನು ನಾವು ಆಚರಣೆಗೆ ತಂದೆವು. ಇದರಿಂದ ಸಾವಿರಾರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿದೆವು. ನಾವು ಸಿಡುಬನ್ನು ನಿರ್ಮೂಲನಗೊಳಿಸಿದೆವು; ಮತ್ತು ಮಲೇರಿಯಾವನ್ನು ಹತೋಟಿಯಲ್ಲಿ ತಂದೆವು. ನಮ್ಮ ಪ್ರಜೆಗಳ ಆಯುರ್ಮಾನವು ವಾಸ್ತವವಾಗಿ ಇಮ್ಮಡಿಸಿತು. ಈಗ ಇದು ೫೭ ವರ್ಷಕ್ಕೂ ಏರಿದೆ.

ಇದನ್ನು ಸಾಧ್ಯವಾಗಿಸಿದ ನಮ್ಮ ಎಲ್ಲ ಡಾಕ್ಟರುಗಳನ್ನು, ನರ್ಸ್‌ಗಳನ್ನೂ ಮತ್ತು ಇತರರನ್ನೂ ನಾನು ಅಭಿನಂದಿಸುತ್ತೇವೆ.

ಹಾಗೆಯೇ, ಶಿಕ್ಷಣ ಕ್ಷೇತ್ರದಲ್ಲಿ ನಾವು ನೋಡಿದರೆ, ಹೆಚ್ಚು ಕಡಿಮೆ ಪ್ರತಿ ಹಳ್ಳಿಯಲ್ಲೂ ಒಂದು ಪಾಠಶಾಲೆಯಿದೆ. ಶಿಕ್ಷಣ ಕಾರ್ಯನೀತಿಯಲ್ಲಿ ನಾವು ಅಸಂತುಷ್ಟರಾಗಿರುವುದೇ ಅಲ್ಲದೆ, ಈ ಕಾರ್ಯನೀತಿಯು ತನ್ನ ಪ್ರಸಕ್ತತೆಯನ್ನು ಕಳೆದುಕೊಂಡಿರುವುದರಿಂದ ಇದನ್ನು ಬದಲಾಯಿಸಿದ್ದೇವೆ. ನಾವು ಒಂದು ಹೊಸ ಶಿಕ್ಷಣ ಕಾರ್ಯನೀತಿಯನ್ನು ರೂಪಿಸಿದ್ದೇವೆ. ಇದು ಭಾರತಕ್ಕೆ ಒಂದು ಹೊಸ ಮಾರ್ಗವನ್ನು ಒದಗಿಸಿದೆ. ಇದರಿಂದ ಭಾರತವು ಶಕ್ತಿಯುತವಾಗಿಯೂ, ಏಕತೆ ಮತ್ತು ಸ್ವಾವಲಂಬನೆಯಿಂದಲೂ ಇರುವಂತೆ ಮಾಡುತ್ತದೆ.

ಹಳ್ಳಿಗಳಿಗೆ, ಶಾಖೋಪಶಾಖೆಗಳಂತಿರುವ ರಸ್ತೆಗಳನ್ನು ಒದಗಿಸಿದ್ದೇವೆ. ಕುಡಿಯುವ ನೀರು ಈಗ ಅತ್ಯಧಿಕ ಹಳ್ಳಿಗಳಿಗೆ ಮತ್ತು ಆದಿವಾಸಿಗಳಿರುವ ಜಾಗಗಳಲ್ಲಿ ದೊರೆಯುತ್ತಿದೆ. ಏಳನೆಯ ಯೋಜನೆಯ ಅಂತ್ಯದಲ್ಲಿ ಕುಡಿಯುವ ನೀರಿನ ಸೌಲಭ್ಯ ಎಲ್ಲ ಹಳ್ಳಿಗಳಿಗೆ ದೊರಕುವಂತೆ ಮಾಡುವುದೇ ನಮ್ಮ ಪ್ರಯತ್ನ. ಕೈಗಾರಿಕೋದ್ಯಮವು ಕೋಟ್ಯಾಂತರ ಜನಗಳಿಗೆ ಉದ್ಯೋಗವನ್ನು ಕೊಡಿಸಿದೆ. ಭಾರತವು ತನ್ನ ಹೀನಸ್ಥಿತಿಯನ್ನು ಕಿತ್ತೊಗೆದು, ಪ್ರಗತಿಹೊಂದುತ್ತಿರುವ ಕ್ರಿಯಾತ್ಮಕ ರಾಷ್ಟ್ರವಾಗಿ ಉದಯಿಸಿದೆ. ಕೈಗಾರಿಕಾ ಉತ್ಪನ್ನಗಳು ಜನರ ಜೀವನಮಟ್ಟವನ್ನು ಉತ್ತಮಗೊಳಿಸಲು ಮುಂದಾಗಿವೆ ಮತ್ತು ದೇಶವನ್ನು ಪ್ರಗತಿ ಮತ್ತು ಏಳಿಗೆಯ ಪಥದಲ್ಲಿರಿಸಿವೆ.

ನಮ್ಮ ವಿಜ್ಞಾನಿಗಳು ಮತ್ತು ತಂತ್ರಜ್ಞರು, ವಿವಿಧ ಕ್ಷೇತ್ರಗಳಲ್ಲಿ ಪ್ರಪಂಚದಲ್ಲಿನ ವಿಕಸಿತ ರಾಷ್ಟ್ರಗಳ ಸಮಾನತೆಗೆ ಭಾರತವನ್ನು ತಂದಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅದಕ್ಕಾಗಿಯೇ ನಾವು ಯೋಚಿಸುವುದಿಲ್ಲ. ಯೋಚಿಸುವದು ಸಾಮಾನ್ಯಪ್ರಜೆಗಾಗಿ, ಬಡವರಿಗಾಗಿ, ಹಿಂದುಳಿದವರಿಗಾಗಿ, ನಾವು ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗೆ ಮಾತನಾಡುವ ಉದ್ದೇಶ್ಯ ನಮ್ಮ ಹಳ್ಳಿಗಳಲ್ಲಿರುವ ನಮ್ಮ ಬಡಜನರಿಗೂ ಅದು ತಲುಪುವಂತೆ ಮಾಡುವುದು. ಈ ದಿನ, ನಾವು ಭವಿಷ್ಯದ ಕಡೆ ನೋಡಿದರೆ ಮತ್ತು ೨೧ ನೇ ಶತಮಾನದಲ್ಲಿನ ಭಾರತವನ್ನು ಭಾವಿಸಿಕೊಂಡರೆ ಶಕ್ತಿಯುತ, ಸ್ವಾವಲಂಬನೆಯ, ಆತ್ಮವಿಶ್ವಾಸವುಳ್ಳ, ಆರ್ಥಿಕವಾಗಿ ದೃಢವಾಗಿರುವ ರಾಷ್ಟ್ರವನ್ನು ನಮ್ಮ ಕಣ್ಣು ಮುಂದೆ ಕಾಣುತ್ತೇವೆ. ಸ್ವಾವಲಂಬನೆಗೆ ಪ್ರಾಧಾನ್ಯತೆಯನ್ನು ಕೊಟ್ಟು ನಾವು ಇದನ್ನು ಸಾಧಿಸುತ್ತೇವೆ. ನಮ್ಮ ಬಾವುಟವು ಹೆಮ್ಮೆಯಿಂದ ಹಾರಾಡುತ್ತಿರುವುದನ್ನು ನೋಡುತ್ತಾ ಪ್ರಪಂಚದಲ್ಲಿ ತಲೆ ಎತ್ತಿ ನಾವು ನಡೆಯುತ್ತೇವೆ. ನಾವು ಇದೇ ಮಾರ್ಗವನ್ನು ಹಿಂದೆ ಅನುಸರಿಸಿದ್ದೆವು. ನಾವು ಇನ್ನು

ಮುಂದೆಯೂ ಇದನ್ನೇ ಅನುಸರಿಸುತ್ತೇವೆ. ಇತರ ದೇಶಗಳು ಬೆಳವಣಿಗೆಯ ಬೆಂಬತ್ತಿ ಹೋಗಿ ಭಾರಿ ಸಾಲದಲ್ಲಿ ಮುಳುಗಿದ್ದರೆ, ನಾವು ಇತರ ದೇಶಗಳಂತೆ ಸಾಲದಲ್ಲಿ ಮುಳುಗದಂತೆ ಎಚ್ಚರಿಕೆಯನ್ನು ವಹಿಸಿದ್ದೇವೆ. ಬಹು ದೇಶೀಯ ಕಂಪನಿಗಳ ಒತ್ತಡಕ್ಕೆ ಭಾರತವು ಬಗ್ಗದಂತೆ ನಾವು ಕಾಳಜಿ ವಹಿಸಿದ್ದೇವೆ. ನಮ್ಮ ಪ್ರಗತಿ ಮತ್ತು ಶಕ್ತಿಗೆ ಇರುವುದು ಇದು ಒಂದೇ ಮಾರ್ಗ. ಈ ಪ್ರಗತಿಯ ಹಾದಿಯನ್ನು ಬಿಟ್ಟು ನಾವು ಹೊರಳುವುದಿಲ್ಲ.

ಪುನರ್‍ರೂಪಿತ ೨೦ ಅಂಶಗಳ ಕಾರ್ಯಕ್ರಮ

ಬಡವರ, ಬಲಹೀನರ, ಹಿಂದುಳಿದವರ ಕ್ಷೇಮಾಭ್ಯುದಯವೇ ನಮ್ಮ ಪ್ರಥಮ ಪ್ರಾಧಾನ್ಯತೆ. ನಮ್ಮ ಶಕ್ತಿಗಳನ್ನೆಲ್ಲ ಒಟ್ಟುಗೂಡಿಸಿ, ಅವರ ಸ್ಥಿತಿ ಗತಿಗಳನ್ನು ಉತ್ತಮಪಡಿಸಿ ವ್ಯವಸಾಯ ಕ್ಷೇತ್ರದಲ್ಲಿನ ಅಭಿವೃದ್ಧಿ ಕಾರ್ಯ ಕ್ರಮಗಳ ಮೂಲಕ ಮತ್ತು ೨೦ ಅಂಶಗಳ ಕಾರ್ಯಕ್ರಮದ ಮೂಲಕ ಬಡತನ ವನ್ನು ನಿರ್ಮೂಲನ ಮಾಡುವುದೇ ನಮ್ಮ ಪ್ರಯತ್ನವಾಗಿದೆ. ನಮ್ಮ ಆರ್ಥಿಕ ನಿರ್ವಹಣೆಯಲ್ಲಿ ಕೃಷಿಯೇ ಪ್ರಮುಖವಾಗಿರುವುದರಿಂದ ಬಡತನವನ್ನು ನಿರ್ಮೂಲನಗೊಳಿಸಲು ಕೃಷಿ ಕ್ಷೇತ್ರಾಭಿವೃದ್ಧಿಯೇ ನಮ್ಮ ಮುಖ್ಯ ಗುರಿ ಯಾಗಿದೆ. ಈ ಐದು ವರ್ಷಗಳಿಂದೀಚೆಗೆ ಈ ಕಾರ್ಯಕ್ರಮಗಳ ಮುಖಾಂತರ ಹತ್ತು ಕೋಟಿ ಜನಗಳನ್ನು ದಾರಿದ್ರ್ಯ ರೇಖೆಯಿಂದ ಮೇಲೆತ್ತಲು ನಾವು ಸಫಲರಾಗಿದ್ದೇವೆ. ಏಳನೆಯ ಯೋಜನೆಯ ಅಂತ್ಯದಲ್ಲಿ, ದೇಶದ ಮುಕ್ಕಾಲು ಭಾಗದ ಜನರ ಈ ದಾರಿದ್ರ್ಯ ರೇಖೆಯಿಂದ ಮೇಲೆತ್ತಲು ಶಕ್ತರಾಗುತ್ತೇ ವೆಂದು ನಾವು ನಂಬಿದ್ದೇವೆ. ನಮ್ಮ ಪ್ರಯತ್ನವು, ಬಡತನವನ್ನು ನಮ್ಮ ದೇಶದಿಂದಲೇ ಅಳಿಸಿ ಹಾಕುವುದು.

ಪುನರ್‍ರಚಿತ ೨೦ ಅಂಶಗಳ ಕಾರ್ಯಕ್ರಮವನ್ನು ನಮ್ಮ ದೇಶದ ಮುಂದೆ, ಶೀಘ್ರದಲ್ಲೇ ಇಡಲು ನಾನು ಉದ್ದೇಶಿಸಿದ್ದೇನೆ. ಈಗಿನ ೨೦ ಅಂಶಗಳ ಕಾರ್ಯಕ್ರಮವನ್ನು ಮಾರ್ಪಡಿಸಿದ್ದೇವೆ ಮತ್ತು ಉತ್ತಮಗೊಳಿಸಿದ್ದೇವೆ. ಯಾವ ಕಾರ್ಯಕ್ರಮಗಳು ಪೂರ್ಣಗೊಂಡಿವೆಯೋ ಮತ್ತು ತಮ್ಮ ಧ್ಯೇಯ ವನ್ನು ನೆರವೇರಿಸಿರುವುವೋ ಅಂತಹವುಗಳನ್ನು ಬಿಟ್ಟು ಹೊಸದವುಗಳನ್ನು ಸೇರಿಸಿದ್ದೇವೆ. ಈ ಪುನರ್‍ರಚಿತ ೨೦ ಅಂಶಗಳ ಕಾರ್ಯಕ್ರಮದಲ್ಲಿ, ಇನ್ನೂ ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸುವುದಕ್ಕೆ ಅವಕಾಶಗಳಿರುವಂತೆ ನಾವು ಖಚಿತ ಪಡಿಸಿಕೊಳ್ಳುತ್ತೇವೆ.

ಬಡವರ ಏಳಿಗೆಗೆ ಕಂಕಣ ತೊಟ್ಟಿದ್ದೇವೆ

ಈ ಹಿಂದಿನ ಒಂದು ವರ್ಷದಲ್ಲಿ ನಾನು ದೇಶದಲ್ಲಿ ಸವಿಸ್ತಾರವಾಗಿ ಸಂಚಾರ ಮಾಡಿದ್ದೇನೆ. ಬಹಳ ಹಿಂದುಳಿದ, ಮತ್ತು ಅತ್ಯಂತ ದಾರಿದ್ರ್ಯ

ಪೀಡಿತ ಸ್ಥಳಗಳನ್ನು, ಆದರಲ್ಲೂ, ಬುಡಕಟ್ಟು ಜನಾಂಗದ ಸ್ಥಳಗಳನ್ನು ವೀಕ್ಷಿಸಲು ನಿರ್ಧಾರ ಮಾಡಿದ್ದೇನೆ. ನಾನು ಬಡವರಲ್ಲಿ ಅತಿ ಬಡವನೊಂದಿಗೆ ಮಾತನಾಡಿದ್ದೇನೆ. ನಾನು ಗ್ರಾಮಸ್ಥರೊಂದಿಗೆ ಅವರ ಮನೆಗಳಲ್ಲಿ, ರೈತರ ಬಳಿ, ಅವರ ಗುಡಿಸಿಲಲ್ಲಿ, ಅವರ ಹೊಲಗಳಲ್ಲಿ ಮಾತನಾಡಿದ್ದೇನೆ. ಪರಿಹಾರ ಕಾರ್ಯಗಳು ನಡೆಯುತ್ತಿರುವಂತಹ ಸ್ಥಳಗಳಲ್ಲಿ ಅವರನ್ನು ಭೇಟಿಮಾಡಿದ್ದೇನೆ. ಅವರ ಕಷ್ಟಗಳಲ್ಲಿ, ಅವರ ಸಂಕಟದಲ್ಲಿ ನಾನು ಭಾಗಿಯಾಗಿದ್ದೇನೆ. ಇದರ ಜೊತೆಗೆ, ಅವರ ಉದ್ದೇಶ ಸಾಧನೆ, ಅವರ ಆಶೆ, ಅವರ ಸಹನೆ, ಅವರ ಆಂತರಿಕ ಸಾಮರ್ಥ್ಯ, ಅವರ ಸತತ ಪ್ರಯತ್ನ, ಅವರ ಕಷ್ಟದ ದುಡಿಮೆ ಮತ್ತು ಅವರ ಪ್ರಯಾಸಗಳನ್ನೂ ಸಹ ನೋಡಿದ್ದೇನೆ. ಅವರು ಎಷ್ಟು ಧೈರ್ಯವಾಗಿ ತಮ್ಮ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂಬುದನ್ನು, ಇದಲ್ಲದೆ ಪಟ್ಟಭದ್ರ ಹಿತಾಸಕ್ತಿಗಳ, ಜಮೀನ್ದಾರರ, ಅಧಿಕಾರಿವರ್ಗದವರ ವಿರುದ್ಧ ಹೇಗೆ ಹೋರಾಡುತ್ತಿದ್ದಾರೆಂಬುದನ್ನು ನೋಡಿದ್ದೇನೆ. ನಮ್ಮ ದೇಶದ ಬಡವರೊಂದಿಗೆ, ದಲಿತರ ಜೊತೆ ಮತ್ತು ನಮ್ಮ ಸಮಾಜದಲ್ಲಿನ ಬಲಹೀನ ವರ್ಗದವರೊಂದಿಗೆ ನಾನು ಇದ್ದೇನೆ. ಅವರ ಉದ್ಧಾರವೇ ನಮ್ಮ ಗುರಿ.

ಹಿಂದುಳಿದ ಮತ್ತು ಹತ್ತಿಕ್ಕಲ್ಪಟ್ಟ ಜನಗಳಲ್ಲಿ ಹರಿಜನರು, ಬುಡಕಟ್ಟಿನವರು ಮತ್ತು ನಮ್ಮ ಮಹಿಳೆಯರೂ ಸೇರಿದ್ದಾರೆ. ಬಹುಶಃ ಇವರು ನಮ್ಮ ಸಮಾಜದಲ್ಲಿ ಅತ್ಯಂತ ಅಧಿಕ ದಲಿತ ವರ್ಗದವರಾಗಿದ್ದಾರೆ. ಇವರ ವಿರುದ್ಧ ಎಲ್ಲ ರೀತಿಯ ಪಕ್ಷಪಾತಗಳನ್ನು ತೊಲಗಿಸಲು ನಾವು ನಿಶ್ಚಯ ಮಾಡಬೇಕು. ಇದಕ್ಕಾಗಿ ಬೇಕಾದ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ನಾನು ಭರವಸೆ ನೀಡಬಲ್ಲೆ. ನಮ್ಮ ಕಾರ್ಯನೀತಿಯನ್ನು ಬದಲಾಯಿಸಬೇಕಾಗಬಹುದು, ನಮ್ಮ ಕಾರ್ಯಕ್ರಮಗಳಲ್ಲಿ ಮಾರ್ಪಾಟುಗಳನ್ನು ಮಾಡಬೇಕಾಗಬಹುದು, ನಮ್ಮ ಮಹಿಳೆಯರು ಗೌರವ, ಸಮಾನಹಕ್ಕು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದುವುದೇ ನಮ್ಮ ಗುರಿ. ★

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧುಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ರಾಷ್ಟ್ರಪತಿ

ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ಚೆನ್ನೈನಗರದಲ್ಲಿರುವ ಆಳ್ವಾರ್ ಸಂಶೋಧನಾ ಕೇಂದ್ರದಲ್ಲಿ ಆಗಸ್ಟ್ ೫.೨೦೦೧ರಂದು ರಾಮಾನುಜ ಪ್ರಶಸ್ತಿಯನ್ನು ಕೊಡಲಾದ ಸಂದರ್ಭದಲ್ಲಿ ಕಲಾಂ ಮಾಡಿದ ಭಾಷಣ. (ಸಂ)

ನಮ್ಮ ಜೀವನ ಮತ್ತು ಸಂಸ್ಕೃತಿ

ಎರಡನೆಯ ಘಟನೆ ಸಂತೋಷಪ್ರದವಾದದ್ದೂ, ಅಲೌಕಿಕ ಸೌಂದರ್ಯಪ್ರದವಾದುದೂ ಆಗಿತ್ತು. ಅಲ್ಲಿ ಲಕ್ಷ್ಮೀತಾತಾಚಾರ್ ಎಂಬ ಸ್ನೇಹಿತರೊಬ್ಬರಿದ್ದಾರೆ. ಅವರು ಕರ್ನಾಟಕದ ಮೇಲುಕೋಟೆಯಲ್ಲಿರುವ ಸಂಸ್ಕೃತ ಸಂಶೋಧನಾ ಸಂಸ್ಥೆಯ ನಿರ್ದೇಶಕರು. ಅವರು ತಮಿಳು ಮತ್ತು ಸಂಸ್ಕೃತದಲ್ಲಿ ಪಾರಂಗತರು. ಪಾಣಿನಿ ವ್ಯಾಕರಣದಲ್ಲಿ ನನಗೆ ಆಸಕ್ತಿಯಿದೆ. ಆ ವಿಷಯವನ್ನು ಕುರಿತಾದ ಕೆಲ ಸಂಶೋಧನಾ ಕಾರ್ಯಗಳು ಸಂಸತ್ತಿನಲ್ಲಿ ನಡೆಯುತ್ತಿವೆ. ನಾನು ಮೇಲುಕೋಟೆಗೆ ಬರಬೇಕೆಂದು ಲಕ್ಷ್ಮೀತಾತಾಚಾರ್ ಆಹ್ವಾನಿಸಿದ್ದರು. ಒಂದು ಸಾವಿರ ವರ್ಷಗಳ ಹಿಂದೆ ಆಚಾರ್ಯ ರಾಮಾನುಜರು ಈ ಪ್ರದೇಶದಲ್ಲಿ ಸಂಚರಿಸಿದ್ದರು. ಜುಲೈ ೨೬ ರಂದು ಮೇಲುಕೋಟೆಗೆ ಭೇಟಿ ಕೊಡುವ ಸದಾವಕಾಶ ನನಗೆ ಒದಗಿತು. ಮೇಲುಕೋಟೆಯನ್ನು ತಲುಪಿದಾಕ್ಷಣ ವಿಲಕ್ಷಣವಾದ ಸಂತೋಷವನ್ನು ಅನುಭವಿಸಿದೆ. ಇದೇ ಸ್ಥಳದಲ್ಲಿ ರಾಮಾನುಜ ನಡೆದಾಡಿದ್ದನ್ನೂ, ವಿಶ್ವಕ್ಕೆ ಆಧ್ಯಾತ್ಮಿಕ ಮಾರ್ಗ ತೋರಿಸಿದ್ದನ್ನೂ ಸ್ಮರಿಸಿಕೊಂಡೆ. ಓಡಾಡುವಾಗ ಒಂದು ರೀತಿಯ ದೈವಿಕ ತೃಪ್ತಿಯನ್ನನುಭವಿಸಿದೆ. ನಾನು ತಾತಾಚಾರರ ನೇತೃತ್ವದ ಸಂಶೋಧನಾ ಕೇಂದ್ರವನ್ನು ನೋಡಿದೆ. ಅವರು ನಿರ್ಮಿಸಿರುವ ಸುಂದರವಾದ ಹೂದೋಟವನ್ನೂ, ಶ್ರೀ ನಾರಾಯಣರ ದೇವಸ್ಥಾನವನ್ನೂ ನೋಡಿದೆ. ಆ ದೇವಸ್ಥಾನ ಆಧ್ಯಾತ್ಮಿಕತೆ ಮತ್ತು ಇತಿಹಾಸವೆರಡನ್ನು ಸೇರಿಸುವ ಕೊಂಡಿಯಾಗಿದೆಯೆಂದು ನನಗನಿಸಿತು. ಯಾವುದೇ ಐತಿಹಾಸಿಕ ಸ್ಥಳ ಒಂದು ಸಹಸ್ರಮಾನದಲ್ಲಿ ನಡೆದುಹೋದ ಕಥೆಯನ್ನು ಹೇಳುತ್ತದೆ. ದೇವಸ್ಥಾನವನ್ನು ನೋಡಿದ ಮೇಲೆ ತಾತಾಚಾರ್ಯರು ನನ್ನನ್ನು ತಮ್ಮ ಮನಮೋಹಕ ಉದ್ಯಾನವನಕ್ಕೆ ಕರೆದೊಯ್ದರು. ಅಲ್ಲಿಯ ಸೃಷ್ಟಿ ಸೌಂದರ್ಯವನ್ನು ನೋಡಿ ಉಂಟಾದ ಸಂತೋಷವನ್ನು ನಾ ಮರೆಯಲಾರೆ. ನಾನು ತಿರುಗಿದತ್ತೆಲ್ಲ ಹೂಗಳಿಂದಲೂ, ಗಿಡಗಳಿಂದಲೂ, ಸಸ್ಯಗಳಿಂದಲೂ, ತರಕಾರಿ ಹಾಗೂ ಹಣ್ಣುಗಳಿಂದಲೂ ತುಂಬಿದ ಹಸಿರನ್ನು ನೋಡಿದೆ. ಅಲ್ಲಿ ವೈವಿಧ್ಯಮಯ ಬಣ್ಣಗಳಿಂದ ಕೂಡಿದ ವೈವಿಧ್ಯಮಯ ಹೂಗಳಿದ್ದವು. ಆ ಹೂಗಳನ್ನು ಸುತ್ತುವರಿಯುತ್ತಿದ್ದ ದುಂಬಿಗಳು, ಮನಸ್ಸನ್ನು ಸೂರೆಗೊಳ್ಳುವ ಚಿಟ್ಟೆ

ಗಳು, ಹಾಡುವ ಹಕ್ಕಿಗಳು, ನರ್ತಿಸುವ ನವಿಲುಗಳು, ಆನಂದದಿಂದ ಕುಣಿಯುವ ಜಿಂಕೆಗಳು ಇದ್ದವು. ಕಾತುರಗೊಂಡಿರುವ ಮೀನುಗಳಿಂದ ತುಂಬಿರುವ ಕೊಳದಲ್ಲಿಯ ಮೀನುಗಳು ತಾತಾಚಾರ್ಯ ಮತ್ತು ಅವರ ಈ ಅತಿಥಿಯನ್ನು ನೋಡಲು ನೀರಿನ ಮೇಲ್ಭಾಗಕ್ಕೆ ಬಂದವು. ಈ ಎಲ್ಲ ಪ್ರಾಕೃತಿಕ ಸೌಂದರ್ಯವು ನನಗೆ ಬಹಳ ಸಂತೋಷವನ್ನು ಕೊಟ್ಟಿತು. ಎಂಥ ಅದ್ಭುತವಾದ ದೃಶ್ಯ ! ಅಂಥ ಸುಂದರ ಪ್ರಕೃತಿಯ ಮಧ್ಯದಲ್ಲಿ ಸಂಸ್ಕೃತ ಸಂಶೋಧನಾ ಕೇಂದ್ರದ ಸಾಧು ಜನರು "ಪುರುಷ ಸೂಕ್ತಂ" ಕುರಿತು ಮಂತ್ರಗಳನ್ನು ಹೇಳುತ್ತಿದ್ದರು. ಇದನ್ನು ಸ್ವರ್ಗವೆಂದು ಕರೆಯಬಹುದೇ ಎಂದು ನಾನು ಆಶ್ಚರ್ಯಪಟ್ಟೆ. ಆ ಸ್ಥಳದಲ್ಲಿ ಒಂದು ಸ್ಪಷ್ಟವಾದ ದೈವಿಕತೃಪ್ತಿಯಿತ್ತು. ಅಲ್ಲಿ ಭಗವಂತ ಮತ್ತು ಪ್ರಕೃತಿಯ ಮಿಲನವಾಗಿತ್ತು. ನಾನು ತರಕಾರಿ ಹಣ್ಣು ಮತ್ತು ಹೂಗಳನ್ನು ನೋಡಿದೆ ಅವೆಲ್ಲವೂ ಶ್ರಮ ಮತ್ತು ಬೆವರಿನ ಫಲ. ಎಲ್ಲ ಗಿಡಗಳನ್ನು ಸಾವಯವ ಗೊಬ್ಬರದಿಂದ ಬೆಳೆಯಲಾಗಿದೆ. ಕಠಿಣ ಶ್ರಮ ಮತ್ತು ಬೆವರು ಮಾತ್ರ ಸುಂದರ ವಾದ ಹೂಗಳನ್ನು ಅರಳಿಸಬಲ್ಲವು ಮತ್ತು ಎಲ್ಲೆಡೆ ಸುವಾಸನೆಯನ್ನು ಹರಡಬಲ್ಲವು ಎಂದು ನಾನು ಕೂಡಲೆ ಅರಿತೆ. ಎಲ್ಲಿ ಆಧ್ಯಾತ್ಮಿಕತೆ ಕಠಿಣ ಪರಿಶ್ರಮದೊಂದಿಗೆ ಸೇರುತ್ತದೋ ಅಂಥಲ್ಲಿ ಭೂಮಿಯ ಮೇಲೆ ಸ್ವರ್ಗ ಇಳಿದಿರುವುದನ್ನು ನಾವು ಕಾಣುತ್ತೇವೆ.

ನಂತರ ನನ್ನನ್ನು ಪುಸ್ತಕಾಲಯಕ್ಕೆ ಕರೆದೊಯ್ದರು. ಅಲ್ಲಿ ಪ್ರಾಚೀನ ಹಸ್ತಪತ್ರಿಕೆ ಮತ್ತು ತಾಳೆ ಗರಿಗಳನ್ನು ನೋಡುತ್ತಾ ಒಂದು ಗಂಟೆ ಕಾಲ ಕಳೆದೆ. ಹಸ್ತಪ್ರತಿಗಳು ಮತ್ತು ಓಲೆಗರಿಗಳು ಸಾವಿರಾರು ವರ್ಷಗಳಿಂದ ಬಹಳ ಜಾಗ್ರತೆಯಿಂದ ರಕ್ಷಿಸಲ್ಪಟ್ಟಿವೆ. ಅದೇ ಪುಸ್ತಕಾಲಯದಲ್ಲಿ ಬಹಳ ಅಪರೂಪದ ಹಳೆಯ ಮತ್ತು ಹೊಸ ಪುಸ್ತಕಗಳ ಸಂಗ್ರಹವನ್ನೂ ನೋಡಿದೆ. ತಾತಾಚಾರ್ ಅವರು ತಮ್ಮ ಕಂಪ್ಯೂಟರ್ ನೊಂದಿಗೆ ಒಂದು ಬಂಡೆಯ ಮೇಲೆ ವಿಶಿಷ್ಟ ಗುರುಕುಲ ವಾತಾವರಣದಲ್ಲಿ ಕುಳಿತು ಕೆಲಸ ಮಾಡುವುದನ್ನು ನೋಡಿದೆ, ಕಂಪ್ಯೂಟರ್ ಮೂಲಕ ಕೈಗೊಳ್ಳಲಾದ ಸಂಶೋಧನೆಗಳ ಬಗ್ಗೆ ಅವರು ವಿವರಗಳನ್ನು ಕೊಡುತ್ತಿದ್ದರು. ಇದು ನಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿಕೊಳ್ಳುತ್ತಾ ವಿಚಾರಗಳಲ್ಲಿ ಮತ್ತು ದೃಷ್ಟಿಕೋನಗಳಲ್ಲಿ ಆಧುನಿಕತೆಯನ್ನು ಸದಾ ಹೊಂದಿರಲೇಬೇಕೆಂಬುದರ ಸಂಕೇತವಾಗಿದೆ. ನಮ್ಮ ಭಾರತೀಯ ಸಂಸ್ಕೃತಿ ಅಭಿವೃದ್ಧಿಶೀಲವೂ ಮತ್ತು ಪರಿಶುದ್ಧಗೊಳ್ಳುತ್ತಾ ಹೋಗುವಂಥದೂ ಇದೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಾರವನ್ನು ಉಳಿಸಿಕೊಳ್ಳುತ್ತ ಆಧುನಿಕತೆಯ ಜೀವನವನ್ನು ಮತ್ತು ಭವಿಷ್ಯದ ಜೀವನವನ್ನು ಇಲ್ಲಿ ಅನುಸರಿಸಲಾಗುತ್ತಿದೆ. ನಾವು ದಿಲ್ಲಿಯನ್ನು ತಲುಪಿದ ಮೇಲೂ ಮೇಲುಕೋಟೆಯ ಪ್ರಭಾವ ನನ್ನನ್ನು ಬಿಡಲಿಲ್ಲ.

ಅನು : -ಸುರೇಂದ್ರ ಕೌಲಗಿ

ಜಾಹಿರಾತುದಾರರ ಗಮನಕ್ಕೆ

ಜನಪದ ವಿಚಾರವು ರಾಜ್ಯದ

ವಿಚಾರವಂತರ, ವಿದ್ಯಾರ್ಥಿಗಳ
ಹಾಗೂ
ವಿವಿಧ ಸಂಸ್ಥೆಗಳ
ಬಳಿ ತಲುಪುತ್ತಿದೆ.
ಇದರ ಲಾಭವನ್ನು
ಜಾಹಿರಾತುದಾರರು ಪಡೆಯಬೇಕಾಗಿ ವಿನಂತಿ.

ಜಾಹಿರಾತು ದರ:–

(1)	ಪೂರ್ತಿ ಪುಟ	2000/-ರೂ.
(2)	ಅರ್ಧ ಪುಟ	1000/-ರೂ.
(3)	ಕಾಲು ಪುಟ	500/-ರೂ.

ವರ್ಷವಿಡೀ ಜಾಹಿರಾತುದಾರರಿಗೆ ಬಹಳಷ್ಟು ರಿಯಾಯಿತಿ ಉಂಟು.

ಸಂಪರ್ಕಿಸಿ : ಪ್ರಕಾಶಕರು, ಜನಪದ ವಿಚಾರ,

ಮೇಲುಕೋಟೆ 571 431

KA-SKMND-470/-2000, ತೆರೆದ-ಅಂಚೆ

Regd No: KAR/KAN/2000/3820

Vol 3 Issue 1.

Janapada Vichara - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust (Regd) Melkote, Dist - Mandya 571 431.

Phone : 0823/648754